بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْکَرِیْمِ    وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 29

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22 ಜುಲೈ 2021, 22 ವಫಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
11 ಝುಲ್ ಹಜ್ಜ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا لَا تَتَّخِذُوا الَّذِيْنَ اتَّخَذُوْا دِيْنَكُمْ هُزُوًا وَّلَعِبًا مِّنَ الَّذِيْنَ اُوْتُوا الْكِتٰبَ مِنْ قَبْلِكُمْ وَالْكُفَّارَ اَوْلِيَآءَ ۚ وَاتَّقُوا اللّٰهَ اِنْ كُنْتُمْ مُّؤْمِنِيْنَ

(ಅಲ್‌ಮಾಇದ: 58)

ಅಂದರೆ: ಎಲೈ ವಿಶ್ವಾಸಿಗಳೇ, ನಿಮಗಿಂತ ಮುಂಚೆ ಗ್ರಂಥ ನೀಡಲ್ಪಟ್ಟವರ ಮತ್ತು ಅವಿಶ್ವಾಸಿಗಳ ಪೈಕಿ ನಿಮ್ಮ ಧರ್ಮವನ್ನು ಅಪಹಾಸ್ಯ ಮಾಡುವ ಮತ್ತು ವಿನೋದಕ್ಕೆ ಗುರಿಪಡಿಸುವವರನ್ನು ನೀವು ಮಿತ್ರರನ್ನಾಗಿ ಮಾಡಬೇಡಿರಿ. ನೀವು ಸತ್ಯವಿಶ್ವಾಸಿಗಳೆಂದಾದರೆ, ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

(1382) ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಯಹೂದಿ ಮಹಿಳೆಯೊಬ್ಬಳು ಅವರ ಬಳಿಗೆ ಬಂದಿದ್ದಳು ಮತ್ತು ಆಕೆ ಗೋರಿಯ ಶಿಕ್ಷೆಯ ಬಗ್ಗೆ ವಿವರಣೆ ನೀಡಿದಳು ಮತ್ತು ಅವರೊಡನೆ ಹೇಳಿದಳು ಅಲ್ಲಾಹನು ನಿಮಗೆ ಗೋರಿಯ ಶಿಕ್ಷೆಯಿಂದ ರಕ್ಷಿಸಲಿ. ಹಝ್ರತ್ ಆಯಿಶಾ(ರ) ರಸೂಲುಲ್ಲಾಹ್(ಸ) ರೊಡನೆ ಗೋರಿಯ ಶಿಕ್ಷೆಯ ಬಗ್ಗೆ ಕೇಳಿದರು. ಆಗ ಅವರು ಹೇಳಿದರು. ಹೌದು ಗೋರಿಯ ಶಿಕ್ಷೆ ಅವಶ್ಯವಾಗಿ ಉಂಟಾಗುವುದು. ಹಝ್ರತ್ ಆಯಿಶಾ(ರ) ಹೇಳುತ್ತಾರೆ. ಆ ನಂತರ ನಾನೆಂದೂ ರಸೂಲುಲ್ಲಾಹ್(ಸ) ಅವರಿಗೆ ಯಾವ ನಮಾಝ್ ಸಹ ಗೋರಿಯ ಶಿಕ್ಷೆಯಿಂದ ರಕ್ಷಣೆ ಬಯಸದೆ ನಿರ್ವಹಿಸಿಲ್ಲ. ಗಂದರ್ ಅವರು ತಮ್ಮ ವರದಿಯಲ್ಲಿ 'ಗೋರಿಯ ಶಿಕ್ಷೆ ಸತ್ಯವಾಗಿದೆ'.....

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಯಝ್ ಮುದ್ರಣ 2008 ಖಾದಿಯಾನ್)**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ದೇವದೂತರ (ಮಲಕ್) ಮೇಲೆ, ಅಲ್ಲಾಹನ ಗ್ರಂಥಗಳ ಮೇಲೆ, ರಸೂಲುಲ್ಲಾಹ್(ಸ) ರವರ ಹದೀಸುಗಳ ಮೇಲೆ, ಸ್ವರ್ಗ, ನರಕ, ಗೋರಿಯ ಶಿಕ್ಷೆ, ವಿಧಿ, ಅಂತ್ಯದಿನ ಎಲ್ಲದರ ಮೇಲೆ ಸತ್ಯನಿಷ್ಠೆಯಿಂದ ವಿಶ್ವಾಸ ಹೊಂದಿರುತ್ತೇವೆ. ನಾವು ಇಂತಹ ಕಾರ್ಯಗಳ ವಿವರಗಳನ್ನು ಅಲ್ಲಾಹನಿಗೆ ಒಪ್ಪಿಸುತ್ತೇವೆ. ಏಕೆಂದರೆ ಧರ್ಮದ ಜಾಗೃತಿಯ ಅವಸ್ಥೆಯನ್ವಯ ಮನುಷ್ಯನು ಒಟ್ಟಾರೆ ವಿಶ್ವಾಸ ಹೊಂದುವುದಾಗಿದೆ. ಒಳಮರ್ಮಗಳ ವಿವರಣೆ ಎಲ್ಲ ಅಲ್ಲಾಹನಿಗೆ ಒಪ್ಪಿಸಬೇಕು."

**(ಮಲ್ಫೂಝಾತ್ ಸಂಪುಟ–5, ಪುಟ–134, ಮುದ್ರಣ ಖಾದಿಯಾನ್ ಸಂಚಿಕೆ 2003)**

ಈ ಹದೀಸುಗಳನ್ನು ಬಾಹ್ಯ ಅರ್ಥದಲ್ಲಿ ತೆಗೆದುಕೊಳ್ಳಲಾಗದು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಗೋರಿಯ ಶಿಕ್ಷೆಯ ಕುರಿತು ಹದೀಸುಗಳಲ್ಲಿ ಯಥೇಚ್ಛವಾಗಿ ಈ ವಿವರಗಳು ಕಾಣಸಿಗುತ್ತವೆ. ಪಾಪಿಗಳಿಗೆ ಅಲ್ಲಿ ಚೇಳುಗಳು ಇರುವುದು. ಸರ್ಪಗಳು ಇರುವುದು, ಬೆಂಕಿ ಇರುವುದು. ಅದನ್ನೆಲ್ಲ ನಾವು ಬಾಹ್ಯ ಅರ್ಥ ಕಲ್ಪಿಸುವುದಾದರೆ ಕೆಲ ಗೋರಿಗಳನ್ನು ಅಗೆದು ಅದರಲ್ಲಿ ಹಾವು ಮತ್ತು ಚೇಳುಗಳನ್ನು ತೋರಿಸಿರಿ." **(ಇಝಾಲಾ ಅವ್‌ಹಾವ್, ರೂಹಾನಿ ಖಝಾಇನ್ ಸಂಪುಟ–3, ಪುಟ–316)**

**ಅಲ್ಲಾಹನು ವಿಭಿನ್ನ ಪ್ರವಾದಿಗಳಲ್ಲಿ ಇರುವಂತಹ ಎಲ್ಲಾ ಮಹೋನ್ನತ ಕಾರ್ಯಸಾಧನೆಗಳನ್ನು ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವದಲ್ಲಿ ಒಟ್ಟುಗೊಳಿಸಿದ್ದಾನೆ. ಮತ್ತು ಎಲ್ಲಾ ಗುಣಗಳು ಹಾಗೂ ಮಹಾನತೆಗಳು ವಿಭಿನ್ನ ಗ್ರಂಥಗಳಲ್ಲಿರುವುದನ್ನು ಪವಿತ್ರ ಖುರ್‌ಆನ್‌ನಲ್ಲಿ ಕ್ರೂಢಿಕರಿಸಿದ್ದಾನೆ. ಎಷ್ಟೆಲ್ಲಾ ಮಹೋನ್ನತೆಗಳು ಸಮುದಾಯಗಳಳಿದ್ದವು. ಅವುಗಳನ್ನೆಲ್ಲ ಈ ಸಮುದಾಯದಲ್ಲಿ ಒಟ್ಟುಗೊಡಿಸಿರುತ್ತಾನೆ. ಆದುದರಿಂದ ನಾವು ಆ ಮಹಾನತೆಗಳನ್ನು ಪಡೆಯುವವರಾಗಬೇಕು ಎಂದು ಅಲ್ಲಾಹನು ಬಯಸುವನು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಹಝ್ರತ್ ರಸೂಲುಲ್ಲಾಹ್(ಸ) ರವರ ಆಗಮನ ಮತ್ತು ಪವಿತ್ರ ಖುರ್‌ಆನ್‌ನ ಅವತರಣೆಯ ಉದ್ದೇಶ

ಅಲ್ಲಾಹನು ಪ್ರವಾದಿಗಳನ್ನು ಕಳುಹಿಸುವ ಮತ್ತು ಅಂತ್ಯದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಲೋಕೋದ್ಧಾರಕರಾಗಿ ಕಳುಹಿಸುವ ಮತ್ತು ಪವಿತ್ರ ಖುರ್‌ಆನ್‌ನ್ನು ಅವತರಿಸುವ ಉದ್ದೇಶವೇನಿತ್ತು? ಪ್ರತಿಯೊಬ್ಬ ಕೆಲಸಮಾಡುವ ವ್ಯಕ್ತಿ ಏನಾದರೊಂದು ಉದ್ದೇಶ ಇಟ್ಟಿಕೊಂಡಿರುತ್ತಾನೆ. ಹೀಗಿರುವಾಗ ಪವಿತ್ರ ಖುರ್‌ಆನ್ ಅವತರಿಸಲು ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಅಲ್ಲಾಹನು ಕಳುಹಿಸಲು ಯಾವುದೇ ಉದ್ದೇಶ ಮತ್ತು ಕಾರಣವಿಲ್ಲ ಎಂದು ಭಾವಿಸುವುದು ಮೂರ್ಖತನವಾದೀತು. ಏಕೆಂದರೆ ಅದರಲ್ಲಿ (ಮುಅಝುಲ್ಲಾಹ್) ಅಲ್ಲಾಹನ ಕಡೆ ಒಂದು ನಿರರ್ಥಕ ಕಾರ್ಯಮಾಡುವವ ಎಂದು ಬೊಟ್ಟು ಮಾಡುವ ಹಾಗಾಗುವುದು. ಅದಾಗ್ಯೂ ಅಲ್ಲಾಹನು ಎಲ್ಲಾ ನ್ಯೂನತೆಗಳಿಂದ ಮುಕ್ತ ಹಾಗೂ ಪವಿತ್ರನಾಗಿದ್ದಾನೆ. **(ಸುಬ್‌ಹಾನಹೂ ವತಅಲಹೂ ಶಅ್‌ನುಹೂ)**

ಆದುದರಿಂದ ನೆನಪಿಡಿರಿ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಆಗಮನದಿಂದ ಅಲ್ಲಾಹನು ಬಯಸಿದ್ದೇನೆಂದರೆ–ಲೋಕಕ್ಕೆ ಒಂದು ಮಹೋನ್ನತವಾದ ಕಾರುಣ್ಯದ ದೃಷ್ಟಾಂತ ತೋರಿಸಬೇಕು. ಉದಾಹರಣೆಗೆ ಅಲ್ಲಾಹನು ಹೇಳಿದನು "**ವಮಾ ಅರ್ಸಲ್ನಾಕ ಇಲ್ಲಾ ರಹ್ಮತುಲ್ಲಿಲ್ ಆಲಮೀನ್**" (ಅಂಬಿಯಾ: 108) ಅದರಂತೆಯೇ ಖುರ್‌ಆನ್ ಅವತರಿಸುವ ಉದ್ದೇಶವು **"ಹುದುಲ್ ಲಿಲ್‌ಮುತ್ತಖೀನ್"** (ಅಲ್ ಬಖರ: 3) ಎಂದಾಗಿದೆ. ಇವು ಎಂತಹ ಮಹೋನ್ನತವಾದ ಉದ್ದೇಶಗಳಾಗಿವೆ ಎಂದರೆ ಅದರ ಮಾದರಿ ಸಿಗಲಾರವು. ಆದುದರಿಂದ ಅಲ್ಲಾಹನು ಬಯಸುವನು. ಯಾವ ರೀತಿ ಎಲ್ಲಾ ಮಹೋನ್ನತ ಕಾರ್ಯಸಾಧನೆಗಳು ವಿಭಿನ್ನ ಪ್ರವಾದಿಗಳಳಿದ್ದವು. ಅವು ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವದಲ್ಲಿ ಒಟ್ಟುಗೂಡಿಸಿದನು ಮತ್ತು ಎಲ್ಲಾ ಗುಣಗಳು ಹಾಗೂ ಮಹಾನತೆಗಳು ವಿಭಿನ್ನ ಗ್ರಂಥಗಳಲ್ಲಿರುವುದನ್ನು ಪವಿತ್ರ ಖುರ್‌ಆನ್‌ನಲ್ಲಿ ಕ್ರೂಢಿಕರಿಸಿದನು. ಅದರಂತೆಯೇ ಎಷ್ಟೆಲ್ಲಾ ಮಹಾನತೆಗಳು ಎಲ್ಲಾ ಸಮುದಾಯಗಳಳಿದ್ದವು ಅವೆಲ್ಲಾ ಈ ಸಮುದಾಯದಲ್ಲಿ ಒಟ್ಟುಗೊಳಿಸಿದನು. ಆದುದರಿಂದ ಅಲ್ಲಾಹನ ಬಯಕೆ ನಾವು ಆ ಮಹಾನತೆಗಳನ್ನು ಪಡೆಯುವಂತಾಗಬೇಕು. ಮತ್ತು ಈ ಮಾತನ್ನು ಸಹ ಮರೆಯಬಾರದು. ಅವನು ಎಷ್ಟೆಲ್ಲಾ ಮಹೋನ್ನತ ಪದವಿಗಳನ್ನು ನೀಡಬಯಸುವನೋ ಅದಕ್ಕೆ ತಕ್ಕುದಾದ ಶಕ್ತಿ ಸಾಮರ್ಥ್ಯಗಳು ಒದಗಿಸಲಿಲ್ಲ ಎಂದಾದರೆ ಯಾವ ರೂಪದಲ್ಲೂ ನಾವು ಅದನ್ನು ಪಡೆಯಲಾರೆವು. ಅದರ ಉದಾಹರಣೆ ಹೀಗಿದೆ. ವ್ಯಕ್ತಿಯೊಬ್ಬ ಒಂದು ಪಂಗಡವನ್ನು ಆಮಂತ್ರಿಸುತ್ತಾನೆ ಎಂದಾದರೆ ಅದಕ್ಕೆ ತಕ್ಕುದಾದ ಊಟ ಮತ್ತು ಅರ್ಹವಾದ ಮನೆ ಅವಶ್ಯವಾಗಿರಬೇಕಾಗುತ್ತದೆ. ಒಂದು ಸಾವಿರ ಜನರನ್ನು ಆಮಂತ್ರಿಸಿ ಅವರಿಗೆ ಕುಳಿತುಕೊಳ್ಳಲು ಒಂದು ಸಣ್ಣದಾದ ಗುಡಿಸಲು ವ್ಯವಸ್ಥೆ ಮಾಡಲು ಖಂಡಿತವಾಗಿಯೂ ಸಾಧ್ಯವಿಲ್ಲ. ಬದಲು ಅದಕ್ಕೆ ತಕ್ಕುದಾದ ವ್ಯವಸ್ಥೆ ಮಾಡುವರು. ಹಾಗೆಯೇ ಅಲ್ಲಾಹನ ಗ್ರಂಥವು ಸಹ ಒಂದು ಆಮಂತ್ರಣ ಮತ್ತು ಆತಿಥ್ಯವಾಗಿದೆ. ಅದಕ್ಕಾಗಿ ಇಡೀ ಪ್ರಪಂಚವನ್ನು ಆಹ್ವಾನಿಸಲಾಗಿದೆ. ಈ ಆಮಂತ್ರಣಕ್ಕಾಗಿ ಅಲ್ಲಾಹನು ತಯಾರಿಸಿದ ಗೃಹ ಪ್ರಕಾರ ಶಕ್ತಿ ಸಾಮರ್ಥ್ಯ ಆ ಜನರಿಗೆ ನೀಡಲಾಗಿದೆ. ಶಕ್ತಿ ಸಾಮರ್ಥ್ಯಗಳಿಲ್ಲದೆ ಯಾವ ಕಾರ್ಯವು ಆಗುವುದಿಲ್ಲ. ಇದೀಗ ಎತ್ತು, ನಾಯಿ ಅಥವಾ ಯಾವುದೇ ಪ್ರಾಣಿಯ ಮುಂದೆ ಪವಿತ್ರ ಖುರ್‌ಆನ್‌ನ ಶಿಕ್ಷಣವನ್ನು ಪ್ರಸ್ತುತಪಡಿಸಿದರೆ ಆದೀತೆ, ಅದು ಅವರು ಗ್ರಹಿಸುವುದಿಲ್ಲ. ಆದುದರಿಂದ ಅವರಿಗೆ ಪವಿತ್ರ ಖುರ್‌ಆನ್‌ನ ಶಿಕ್ಷಣವನ್ನು ನಿಭಾಯಿಸುವ ಶಕ್ತಿ ಇಲ್ಲ. ಆದರೆ ಅಲ್ಲಾಹನು ನಮಗೆ ಅದರಿಂದ ಲಾಭಾನ್ವಿತರಾಗುವಂತಹ ಶಕ್ತಿ ಸಾಮರ್ಥ್ಯಗಳನ್ನು ದಯಪಾಲಿಸಿದ್ದಾನೆ. **(ಮಲ್ಫೂಝಾತ್ ಸಂಪುಟ–1, ಪುಟ–310, 311, ಮುದ್ರಣ 2018 ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**    **Love for All, Hatred for None**

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

## ಅಬ್ದುಲ್ಲ ಆಥಮನಿಗೆ ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನ ಅವರು ಇಸ್ಲಾಮಿ ಭವಿಷ್ಯವಾಣಿಯಿಂದ ಹೆದರಿಕೊಂಡಿಲ್ಲ ಎಂದು ಹೇಳಿಕೆ ನೀಡಬೇಕು.

### ಆಥಮನು ಆಣೆ ಮಾಡಿದರೆ ಮೂರು ಸಾವಿರ ರೂಪಾಯಿಗಳ ಬಹುಮಾನ.

ಹಿಂದಿನ ಸಂಚಿಕೆಯಲ್ಲಿ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಸಾವಿರ ನಂತರ ಎರಡು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ ನೀಡಿರುವ ಕುರಿತು ವಿವರ ನೀಡಿರುತ್ತೇವೆ. ಈ ಸಂಚಿಕೆಯಲ್ಲಿ ನಾವು ಅವರ ಕಡೆಯಿಂದ ನೀಡಲಾದ ಮೂರು ಸಾವಿರ ಮತ್ತು ನಾಲ್ಕು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ ನೀಡಿದ್ದನ್ನು ವಿವರಿಸುವೆವು. ಅವರು ನುಡಿಯುತ್ತಾರೆ.

ಈ ಬರಹದಲ್ಲಿ ಆಥಮ್ ಸಾಹಿಬರಿಗೆ ಮೂರು ಸಾವಿರ ರೂಪಾಯಿಗಳ ಬಹುಮಾನ ನಿಗದಿಪಡಿಸಲಾಗಿದೆ. ಆಣೆ ಮಾಡುತ್ತಲೆ ಈ ಬಹುಮಾನ ತಡವಿಲ್ಲದೆ ಇಬ್ಬರು ನಂಬಲಾರ್ಹ ಶ್ರೀಮಂತರ ಬರಹ ರೂಪದ ಠೇವಣಿ ಪತ್ರ ಅವರಿಗೆ ಒಪ್ಪಿಸಲಾಗುವುದು. ಅವರು ಬಯಸಿದರೆ ಆಣೆ ಮಾಡುವ ಮುಂಚಿತವಾಗಿಯೇ ಬರವಣಿಗೆ ಪಡೆದು ಈ ರೂಪಾಯಿಗಳನ್ನು ಅವರಿಗೆ ಒಪ್ಪಿಸಬಹುದಾಗಿದೆ ಅಥವಾ ಅವರು ಬಯಸಿದ ಎರಡು ವ್ಯಕ್ತಿಗಳ ಸುಪರ್ಧಿಗೆ ಒಪ್ಪಿಸ ಬಹುದಾಗಿದೆ. ನಾವು ಮೇಲ್ಕಾಣಿಸಿದ ಶರತ್ತಿಗೆ ಅನುಗುಣವಾಗಿ ರೂಪಾಯಿಗಳನ್ನು ಕೊಡಲು ಹಿಂಜರಿದರೆ ನಾವು ಸುಳ್ಳುಗಾರರಾಗುವೆವು. ಆದರೆ ಈ ರೀತಿಯ ಅರ್ಜಿಯೊಂದು ಪ್ರಕಟಣೆ ನೀಡುವ ಒಂದು ವಾರದ ಒಳಗೆಯೇ ಬರಬೇಕು. ಆಗ ನಾವು ಮೂರು ವಾರದ ಒಳಗೆ ಯಾವುದೇ ತಾರೀಖಿಗೆ ರೂಪಾಯಿ ತೆಗೆದುಕೊಂಡು ಆಥಮ್ ಸಾಹಿಬರ ಸಮ್ಮುಖದಲ್ಲಿ ಹಾಜರಾಗುವೆವು. ಆದರೆ ಆಥಮ್ ಸಾಹಿಬರ ಕಡೆಯಿಂದ ರಿಜಿಸ್ಟ್ರಾರ್ ಪತ್ರ ಬಂದಾಗಲೂ ನಾವು ಮೂರು ವಾರದೊಳಗೆ ಮೂರು ಸಾವಿರ ರೂಪಾಯಿ ನಗದು ತೆಗೆದುಕೊಂಡು ಅಮೃತ್ಸರ ಅಥವಾ ಫಿರೋಜಪುರ ಅಥವ ಆಥಮ್ ಸಾಹಿಬರು ಪಂಜಾಬಿನ ಯಾವ ನಗರಕ್ಕೆ ಬರಲು ಹೇಳುತ್ತಾರೆ. ಅಲ್ಲಿಗೆ ಹೋಗಿ ಒಪ್ಪಿಸಲಿಲ್ಲ ಎಂದರೆ ನಾವು ನಿಸ್ಸಂಶಯವಾಗಿಯೂ ಸುಳ್ಳುಗಾರರಾಗುವೆವು. ಹಾಗೂ ನಮಗೆ ನಿಮ್ಮನ್ನು ಅಪರಾದಿ ಎನ್ನಲು ಯಾವ ಹಕ್ಕು ಇರುವುದಿಲ್ಲ. ನಾವು ಸ್ವಯಂ ನಮ್ಮನ್ನು ಸದಾಕಾಲಕ್ಕೂ ಅಪರಾಧಿ, ಸೋಲುಂಡವರು ಹಾಗೂ ಸುಳ್ಳುಗಾರರು ಎಂದು ಭಾವಿಸುವೆವು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಿಝಾಇನ್, ಸಂಪುಟ–9, ಪುಟ–71)

### ಇದೀಗ ಮೂರು ಸಾವಿರ ರೂಪಾಯಿಗಳ ಜಾಹೀರಾತು ಪ್ರಕಟಗೊಂಡ ನಂತರ ಆಥಮ್ ಅವರು ನಿಗದಿತ ಅವಧಿಯ ಅಜ್ಞಾತವಾಸದಿಂದ ಹೊರ ಬಂದಾಗ ಏನು ಹೇಳುತ್ತಿರಲಿಲ್ಲ ಮತ್ತು ತಲೆತಗ್ಗಿಸಿಕೊಂಡಿದ್ದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಓದುಗರೇ ಅವರ ಈ ನಡಾವಳಿಕೆಯಿಂದ ಸಾಬೀತಾಗುವುದಿಲ್ಲವೆ, ಅವಶ್ಯವಾಗಿ ಏನೋ ವಿಷಯ ಇದೆ ಎಂದು! ಆಶ್ಚರ್ಯಕರ ವಿಷಯವೇನೆಂದರೆ ಒಂದು ಸಾವಿರ ರೂಪಾಯಿ ನೀಡಬಯಸಿ ರಿಜಿಸ್ಟರ್ ಪತ್ರಿಕೆ ತಲುಪಿಸಿದರೂ ಮೌನವಾಗಿದ್ದರು. ಮತ್ತೆ ಎರಡು ಸಾವಿರ ರೂಪಾಯಿ ಕೊಡಬಯಸಿದ್ದೆ. ಅದಕ್ಕೂ ರಿಜಿಸ್ಟ್ರಾರ್ ಪತ್ರಿಕೆ ಕಳುಹಿಸಿದ್ದೆ. ಆಗಲೂ ಅವರ ಕಡೆಯಿಂದ ಯಾವ ಸದ್ದು ಹೊರಬರಲಿಲ್ಲ. ಎರಡರ ಅವಧಿಯು ಕಳೆಯಿತು. ಇದೀಗ ಮೂರು ಸಾವಿರ ರೂಪಾಯಿಯ ಪತ್ರಿಕೆ ಹೊರಡಿಸುತ್ತಿದ್ದೇನೆ. ಈಗಲಾದರೂ ನಂಬಹುದೇ. ಅವರು ಆಣೆ ಮಾಡಲು ಮೈದಾನಕ್ಕೆ ಬರಬಹುದೆಂದು? ಖಂಡಿತವಾಗಿಯೂ ಬರಲಿಕ್ಕಿಲ್ಲ. ಏಕೆಂದರೆ ಅವರು ಸುಳ್ಳುಗಾರರಾಗಿದ್ದಾರೆ. ಒಬ್ಬ ದುರ್ಬಲ ಮಣ್ಣಿನ ಮನುಷ್ಯನೊಬ್ಬನನ್ನು, ದೇವನನ್ನಾಗಿ ಮಾಡಿ ಪೂಜಿಸುತ್ತಿದ್ದಾರೆ. ಪ್ರಾರಂಭದಲ್ಲಿ ಅವರು ನಿಗದಿತ ಅವಧಿಯ ಸೆರೆವಾಸದಿಂದ ಹೊರ ಬಂದಾಗ ಏನೂ ಹೇಳುತ್ತಿರಲಿಲ್ಲ ಮತ್ತು ತಲೆ ತಗ್ಗಿಸಿಕೊಂಡಿದ್ದರು. ಮತ್ತೆ ನಿಧಾನವಾಗಿ ರಾಕ್ಷಸಿ ಜನರ ಸಹವಾಸ ಪಡೆದು ಅವರ ಕುತಂತ್ರಗಳಿಗೆ ಒಳಗಾಗಿ ಇವರ ಹೃದಯವೂ ಕಠಿಣಗೊಂಡಿದೆ, ಅಲ್ಲಾಹನ ಉಪಕಾರವನ್ನು ಮರೆತುಬಿಟ್ಟರು. ಆದುದರಿಂದ ಅವರ ಅವಸ್ಥೆ ಒಂದು ಕಠಿಣ ಹೃದಯಿ ಮತ್ತು ಲೌಕಿಕವಾಗಿ ಯಾವುದೋ ಮೊಕದ್ದಮೆಯಲ್ಲಿ ಸಿಲುಕಿಕೊಂಡು ಅವರಿಗೆ ಪ್ರಾಣ ಭಯ ಕಾಡುತ್ತಿರಬೇಕು ಅಥವಾ ಜೀವಾವಾಧಿ ಶಿಕ್ಷೆ ಪಡೆಯುವ ಭಯವಿರಬೇಕು. ಆಗ ಅವನು ಹೃದಯಾಂತರಾಲದಿಂದ ಅಲ್ಲಾಹನ ಸಹಾಯ ಯಾಚಿಸಬೇಕು. ತನ್ನ ದುಷ್ಕೃತ್ಯಗಳನ್ನು ಬಿಡುವ ಪಣ ತೊಟ್ಟಿರಬೇಕು. ಮತ್ತೆ ಅದರಿಂದ ಮುಕ್ತಿ ದೊರೆತ ನಂತರ ಅದನ್ನು ತಳ್ಳಿ ಹಾಕಿ ಆ ಮುಕ್ತಿಯನ್ನು ಒಂದು ಸಂಭವನೀಯ ಘಟನೆ ಎಂದು ಹೇಳಿ ಅಲ್ಲಾಹನ ಉಪಕಾರಗಳನ್ನು ಮರೆತಿರಬೇಕು. (ಅದೇ ಪುಟ 74)

### ಆಥಮನು ಆಣೆ ಮಾಡಿದ ಮೇಲೆ ಇದೀಗ ಅವರಿಗಾಗಿ ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನ ನಿಗದಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ಇದಕ್ಕಿಂತ ಮೊದಲು ಮೂರು ಪತ್ರಿಕೆಗಳನ್ನು ಅಧಿಕ ಮೊತ್ತ ಒಳಗೊಂಡ ಬಹುಮಾನ ಎಂದರೆ ಒಂದು ಸಾವಿರ ರೂಪಾಯಿ, ಎರಡು ಸಾವಿರ ರೂಪಾಯಿಯ ಬಹುಮಾನದ ಪತ್ರಿಕೆ. ಮತ್ತು ಮೂರು ಸಾವಿರ ರೂಪಾಯಿಗಳ ಬಹುವಾನದ ಪತ್ರಿಕೆ ಶ್ರೀ ಅಬ್ದುಲ್ಲ ಸಾಹಿಬರಿಗೆ ಆಣೆ ಮಾಡಲು ಪ್ರಕಟಗೊಳಿಸಿದ್ದೆವು, ಒಂದು ವೇಳೆ ಆಥಮ್ ಸಾಹಿಬ್ ನಮ್ಮ ದಿವ್ಯವಾಣಿಯನ್ನು ನಿರಾಕರಿಸುವವರಾದರೆ, ಅಲ್ಲಾಹನು ನಮ್ಮ ಮೇಲೆ ಜಾಹೀರು ಪಡಿಸಿದನು. ಆಥಮ್ ಸಾಹಿಬ್ ಭವಿಷ್ಯವಾಣಿಯ ದಿನಗಳಲ್ಲಿ ದೈವಿಕ ಶಿಕ್ಷೆಯಿಂದ ಭಯಗೊಂಡು ಸತ್ಯದೆಡೆ ರುಜುಪಡಿಸಿಕೊಂಡಿದ್ದರು. ಅವರು ಈಗ ಸಾರ್ವಜನಿಕ ಸಭೆಯಲ್ಲಿ ಆಣೆ ಮಾಡಿ ಹೇಳಲಿ. ಇದು ಅಪ್ಪಟ ಸುಳ್ಳಾಗಿರುತ್ತದೆಂದು. ಆದರೆ ಸುಳ್ಳಲ್ಲ ಬದಲಿಗೆ ಇದು ಸತ್ಯ ಮತ್ತು ದೇವಪರವಾಗಿದೆ. ನಾನು ಸುಳ್ಳು ಹೇಳುವವನಾದರೆ, ಓ ಸರ್ವಶಕ್ತನಾದ ದೇವನೇ ಈ ಸುಳ್ಳಿನ ಶಿಕ್ಷೆ ನನ್ನ ಮೇಲೆ ಅವತರಿಸು. ನಾನು ಒಂದು ವರ್ಷದೊಳಗೆ ಕಠಿಣ ಶಿಕ್ಷೆ ಅನುಭವಿಸಿ ಮರಣ ಹೊಂದುವಂತಾಗಲಿ. ಈ ಆಣೆ ಮಾಡಲು ನಾವು ನಿಮ್ಮಿಂದ ಬಯಸುತ್ತೇವೆ. ನಾವು ಬಹಿರಂಗವಾಗಿ ಬರವಣಿಗೆಯಲ್ಲಿ ನೀಡಿರುತ್ತೇವೆ. ಹಾಗೆ ನ್ಯಾಯ, ಕಾನೂನು ಪ್ರಕಾರ ಆಥಮ್ ಸಾಹಿಬರ ಕರ್ತವ್ಯವೇನೆಂದರೆ ನ್ಯಾಯಕ್ಕಾಗಿ ಅವಶ್ಯವಾಗಿ ಆಣೆ ಮಾಡಬೇಕು. ಭವಿಷ್ಯವಾಣಿಯ ದಿನಗಳಲ್ಲಿ ಇಸ್ಲಾಮಿನ ಸತ್ಯವಾದದಿಂದ ಹೆದರಿಕೊಂಡಿರಲಿಲ್ಲ. ಸ್ಥಿರವಾಗಿದ್ದೆ. ಏಕೆಂದರೆ ಸ್ವಯಂ ಅವರೇ ಹೆದರಿಕೆಯ ಹೇಳಿಕೆ ನೀಡಿರುತ್ತಾರೆ. ಅಂತೂ ಈ ಹೇಳಿಕೆ ಹಲವು ಸಲ ಅತ್ತತ್ತು ಜಾಹೀರುಪಡಿಸಿದ್ದಾರೆ. ಇದೀಗ ಈ ಹೊಣೆ ಅವರ ಮೇಲಿದೆ. ಅವರು ಭವಿಷ್ಯವಾಣಿ ಮತ್ತು ಇಸ್ಲಾಮಿನ ಸತ್ಯವಾದದಿಂದ ಹೆದರಿಕೊಂಡಿಲ್ಲ. ಬದಲು ಹೆದರಿಕೊಂಡ ಕಾರಣವೆಂದರೆ–ಅವರಿಗೆ ಸತತವಾಗಿ ಅನುಭವವಾಗಿತ್ತು. ಈ ಭವಿಷ್ಯವಾಣಿಯ ಮೊದಲೇ ನಾನು ಸಾವಿರಾರು ಜನರ ಕೊಲೆ ಮಾಡಿರುತ್ತೇನೆ ಮತ್ತು ಈಗಲೂ ಸಹ ತನ್ನ ಮಾತನ್ನು ಉಳಿಸಿಕೊಳ್ಳಲು ಅವಶ್ಯವಾಗಿ ಅವರ ಹತ್ಯೆ ಮಾಡಬಹುದು ಎಂದು. ಆ ಕಾರಣದಿಂದ ನಮಗೆ ಕಾನೂನು ಹಾಗೂ ನ್ಯಾಯದ ಪ್ರಕಾರ ಹಕ್ಕಿದೆ. ನಾವು ಜನರ ಮುಂದೆ ನಿಜಸ್ಥಿತಿ ಸ್ಪಷ್ಟಪಡಿಸಬೇಕು. ಆದುದರಿಂದ ನಾವು ಆಥಮ್ ಸಾಹಿಬರಿಂದ ಆಣೆ ಮಾಡಲು ಆಗ್ರಹಿಸುತ್ತಿದ್ದೇವೆ. ಏಕೆಂದರೆ ಯಾರಾದರೂ ಇನ್ನೊಬ್ಬರ ಮನೆಯಲ್ಲಿ ವಿನಾಕಾರಣ ನುಸುಳಿ ಸೆರೆಹಿಡಿಯಲ್ಪಟ್ಟರೆ ನಾನು ಹುಕ್ಕಾ ಸೇದಲು ಬೆಂಕಿಗಾಗಿ ಬಂದಿದ್ದೆ ಎಂಬ ನೆಪಗಳು ಕೇಳಲಾಗುವುದಿಲ್ಲ. ಬದಲಿಗೆ ಅವನ ದೋಷಮುಕ್ತಿಗಾಗಿ ಸ್ಪಷ್ಟೀಕರಣ ಹಾಗೂ ಸಾಕ್ಷಿಯ ಅವಶ್ಯಕತೆಯಿರುತ್ತದೆ. ಹಾಗೆಯೇ ಆಥಮರು ಅದನ್ನು ತನ್ನ ಹದಿನೈದು ತಿಂಗಳುಗಳ ಅವಸ್ಥೆ ಮತ್ತು ತಮ್ಮ ಹೇಳಿಕೆಗಳಿಂದ ಸಾಬೀತುಗೊಳಿಸಿದ್ದಾರೆ. ಅವರು ಭವಿಷ್ಯವಾಣಿಯ ದಿನಗಳಲ್ಲಿ ಅವಶ್ಯವಾಗಿ ಹೆದರಿಕೊಂಡಿದ್ದರು. ನಿಸ್ಸಂಶಯವಾಗಿ ಅವರಿಂದ ಇಂತಹದೊಂದು ಘಟನೆ ಘಟಿಸಿದ್ದು ಕ್ರೈಸ್ತರ ಸ್ಥಿರಚಿತ್ತತೆಗೆ ವಿರುದ್ಧವಾಗಿತ್ತು. ಆ ಘಟನೆ ಭವಿಷ್ಯವಾಣಿ ಅವಧಿಯಲ್ಲಿ ಘಟಿಸಿದ್ದು ಅವರ ಚಟುವಟಿಕೆಗಳನ್ನು ನೋಡಿ ಅವರಿಂದ ವಿವರಣೆ ಪಡೆಯುವಂತಹ ಸಂದರ್ಭ ಒದಗಿ ಬರುತ್ತದೆ. ಭವಿಷ್ಯವಾಣಿಯ ಪ್ರಭಾವದಿಂದ ಆ ಅವಸ್ಥೆ ಉಂಟಾಗಿತ್ತು ಎಂದು ಏಕೆ ಹೇಳಬಾರದು. ಅವಶ್ಯವಾಗಿ ಅವರು ಇಸ್ಲಾಮಿನ ಗೌರವದ ಭಯ ತಮ್ಮ ಮನದಲ್ಲಿರಿಸಿಕೊಂಡಿದ್ದರು. ಆದುದರಿಂದ ನ್ಯಾಯ ನೀತಿ ಸಮ್ಮತವಾಗಿ ನಾವು ಅವರನ್ನು ಆಗ್ರಹಪಡಿಸುತ್ತಿದ್ದೇವೆ. ಅವರು ನಮ್ಮ ಆಶಯದಂತೆ ಆಣೆ ಮಾಡಿ ಮುಕ್ತಗೊಳ್ಳಲಿ. ಆದರೆ ಅವರು ಒಂದು ಸುಳ್ಳು ನೆಪ ನಮ್ಮ ಮುಂದೆ ಪ್ರಸ್ತುತಪಡಿಸುತ್ತಿದ್ದಾರೆ. ನಮ್ಮ ಧರ್ಮದಲ್ಲಿ ಆಣೆ ಮಾಡುವುದು ನಿಷಿದ್ಧವಿದೆ ಎಂದು. ಅದರ ಉದಾಹರಣೆ ಹೀಗಾಯಿತು. ಕಳ್ಳನೊಬ್ಬ ವಿನಾಕಾರಣ ನುಸುಳಿ ಬರುವಾಗ ಸಿಕ್ಕಿಬಿದ್ದನು. ಅವನಿಂದ ಸ್ಪಷ್ಟೀಕರಣ ಕೇಳಿದಾಗ ಅವನ ಯಜಮಾನನಿಗೆ ಹೀಗೆ ಹೇಳಿದನು. ನನ್ನ ಧರ್ಮದನ್ವಯ ಸ್ಪಷ್ಟೀಕರಣಕ್ಕಾಗಿ ಸಾಕ್ಷ್ಯ ನೀಡುವುದು ಅಥವಾ ಆಣೆ ಮಾಡುವುದು ನಿಷಿದ್ಧವಿದೆ. ಆದುದರಿಂದ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನನ್ನನ್ನು ಹಾಗೆಯೇ ಬಿಟ್ಟುಬಿಡಿ.

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರವರ ಓರ್ವ ಅದ್ಭುತ ವ್ಯಕ್ತಿಯಾಗಿದ್ದರು ಅವರ ನ್ಯಾಯ ಪಾಲನೆಯ ಉದಾಹರಣೆ ವಿಶ್ವದಲ್ಲಿ ಕಂಡು ಬರುವುದು ಬಹಳ ವಿರಳವಾಗಿದೆ.**

**ಹಝ್ರತ್ ಉಮರರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಸ್ಲಾಂ ಸ್ವೀಕರಿಸುವುದಕ್ಕೆ ಮುಂಚೆ ನೀವು ಬಹಳ ಕೋಪಗೊಳ್ಳುತ್ತಿದ್ದೀರಿ ಎಂದು ಯಾರೋ ಒಬ್ಬರು ಹಝ್ರತ್ ಉಮರ್‌ರೊಡನೆ ಹೇಳಿದರು. ಆಗ ಹಝ್ರತ್ ಉಮರ್(ರ) ಹೇಳಿದರು: ಕೋಪ ಈಗಲೂ ಇದೆ. ಆದರೆ ಮೊದಲು ಸರಿಯಾದ ಸಂದರ್ಭದಲ್ಲಿ ಆಗಿರಲಿಲ್ಲ. ಈಗ ಸರಿಯಾದ ಸಮಯ ಮತ್ತು ಸಂದರ್ಭದಲ್ಲಿ ಕೋಪಪಡುತ್ತೇನೆ.**

**ಹಝ್ರತ್ ಉಮರ್(ರ) ರವರು ಮೊದಲ ಬಾರಿಗೆ ಭಾಷಣ ನೀಡಿದಾಗ ಅವರ ಮೊದಲ ಪದಗಳು ಇದಾಗಿದ್ದವು ಅವರು ಹೇಳಿದರು: ಅಲ್ಲಾಹುಮ್ಮ ಇನ್ನಿ ಶದೀದುನ್ ಫಲ್ಯೆಯ್ಯನಿ ವ ಇನ್ನಿ ಝೀಫುನ್ ಫಖವ್ವಿನಿ ವ ಇನ್ನಿ ಬಖೀಲುನ್ ಫಸಖಿಯ್ಯ ಅಂದರೆ ಹೇ ಅಲ್ಲಾಹ್, ನಾನು ದುರ್ಬಲನು, ನನ್ನನ್ನು ಶಕ್ತಿಶಾಲಿಯನ್ನಾಗಿ ಮಾಡು. ನಾನು ಕಠಿಣ ಸ್ವಭಾವದವನಾಗಿರುವೆನು, ನನ್ನನ್ನು ಸೌಮ್ಯ ಸ್ವಭಾವದವನನ್ನಾಗಿ ಮಾಡು. ನಾನು ಜಿಪುಣನಾಗಿರುವೆನು, ನನ್ನನ್ನು ಉದಾರಿಯನ್ನಾಗಿ ಮಾಡು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಏಳು(7) ದಿವಂಗತರಾದ ಮಾಜಿ ನಾಝಿರ್ ಬೈತುಲ್ ಮಾಲ್ ಆದ ದಿವಂಗತ ದರ್ವೇಶ್ ಫೈಝ್ ಅಹ್ಮದ್ ಗುಜ್ರಾತಿಯವರ ಪತ್ನಿಯಾದ ಸುಹೈಲ ಮಹ್‌ಬೂಬ್ ಸಾಹಿಬ, ಆಸ್ಟ್ರೇಲಿಯದಲ್ಲಿ ನಿಧನರಾದ ಮುಬಲ್ಲಿಗ್ ರಾಜ ಖುರ್ಶಿದ್ ಅಹ್ಮದ್ ಸಾಹಿಬ್ ಮುಬಲ್ಲಿಗ್, ಝಮೀರ್ ಅಹ್ಮದ್ ನದೀಂ ಸಾಹಿಬ್, ತನ್ಸಾನಿಯದ ಸನ್ಮಾನ್ಯ ಈಸಾ ಮೂಕಿ ತುಲೈಮ ಸಾಹಿಬ್, ಖಾದಿಯಾನಿನ ನಝಾಮತ್ ತಾಮೀರಾತಿನ ಸುಪರ್‌ವೈಸರ್ ಆದ ಶೇಖ್ ಮುಬಶ್ಶಿರ್ ಸಾಹಿಬ್, ಸನ್ಮಾನ್ಯ ಸೈಫಲಿ ಶಾಹಿದ್ ಸಾಹಿಬ್ ಮತ್ತು ಸನ್ಮಾನ್ಯ ರಶೀದ್ ಅಹ್ಮದ್ ಹಯಾತ್‌ರ ಮಗನಾದ ಸನ್ಮಾನ್ಯ ಮಸ್‌ಊದ್ ಅಹ್ಮದ್ ಹಯಾತ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–06–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಇತ್ತೀಚಿಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿದೆ. ಹಝ್ರತ್ ಅಬೂಬಕರರ(ರ) ಮರಣದ ಸಮಯ ಸಮೀಪವಾದಾಗ, ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಉಸ್ಮಾನ್‌ರನ್ನು(ರ) ಬೇರೆ ಬೇರೆಯಾಗಿ ಕರೆದುಕೊಂಡು ಹಝ್ರತ್ ಉಮರರ(ರ) ಕುರಿತು ಕೇಳಿದರು. ಉಮರರನ್ನು ಅತ್ಯಂತ ಶ್ರೇಷ್ಠರೆಂದು ಹೇಳುವುದರೊಂದಿಗೆ ಅವರ ಸ್ವಭಾವದ ಕಾಠಿಣ್ಯದ ಬಗ್ಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ತಿಳಿಸಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: "ನಾನು ಸೌಮ್ಯವಾಗಿ ವರ್ತಿಸುವ ಕಾರಣದಿಂದ ಅವರು ಕಠಿಣವಾಗಿ ವರ್ತಿಸುತ್ತಾರಷ್ಟೆ, ಅವರಿಗೆ ನೇತೃತ್ವ ಸ್ಥಾನ ಸಿಗುವಾಗ ಅವರು ತನ್ನ ಅನೇಕ ಸಂಗತಿಗಳನ್ನು ಬಿಟ್ಟುಬಿಡುವರು." ಎಂದರೆ ಸ್ವಭಾವದ ಕಾಠಿಣ್ಯವನ್ನು ಕಡಿಮೆಗೊಳಿಸುವರು. ಏಕೆಂದರೆ ನಾನು ಯಾವುದಾದರೂ ವ್ಯಕ್ತಿಯೊಂದಿಗೆ ಕಠಿಣ ಕ್ರಮವನ್ನು ತೆಗೆದುಕೊಳ್ಳುವಾಗ, ನಾನು ಹಾಗೆ ಮಾಡದಂತೆ ಇರಲು ಹಝ್ರತ್ ಉಮರ್(ರ) ಪ್ರಯತ್ನಿಸುತ್ತಾರೆ ಹಾಗೂ ನಾನು ಯಾವುದಾದರೂ ವ್ಯಕ್ತಿಯೊಂದಿಗೆ ಸೌಮ್ಯವಾಗಿ ವರ್ತಿಸಿದರೆ, ಅವರೊಡನೆ ಅಲ್ಪ ಕಠಿಣವಾಗಿ ವರ್ತಿಸಲು ಹಝ್ರತ್ ಉಮರ್(ರ) ನನ್ನೊಡನೆ ಹೇಳುತ್ತಿದ್ದರು. ಅನಂತರ ಹಝ್ರತ್ ಉಮರರ ಕುರಿತು ಹಝ್ರತ್ ಉಸ್ಮಾನ್(ರ) ಉತ್ತಮ ಅಭಿಪ್ರಾಯವನ್ನು ಪ್ರಕಟಿಸುತ್ತಾ ಹೀಗೆ ಹೇಳಿದರು: "ಹಝ್ರತ್ ಉಮರರ ಅಂತರಂಗ ಅವರ ಬಹಿರಂಗಕ್ಕಿಂತ ಉತ್ತಮವಾದುದಾಗಿದೆ. ನಮ್ಮಲ್ಲಿ ಯಾರೂ ಅವರಂತೆ ಇಲ್ಲ." ಆಗ ಹಝ್ರತ್ ಅಬೂಬಕರ್(ರ) ಇಬ್ಬರೊಡನೆ ಹೇಳಿದರು: ನಾನು ನಿಮ್ಮೊಡನೆ ಹೇಳಿದ ಸಂಗತಿಗಳನ್ನು ಬೇರೆ ಯಾರೊಡನೆಯೂ ಹೇಳಬೇಡಿರಿ. ಹಝ್ರತ್ ಅಬೂಬಕರ್(ರ) ರೋಗಿಯಾದ ದಿನಗಳಲ್ಲಿ ಹಝ್ರತ್ ಅಬೂಬಕರರ ಸನ್ನಿಧಿಯಲ್ಲಿ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಹಾಜರಾದರು ಮತ್ತು ಹೀಗೆ ಹೇಳಿದರು: ನೀವು ಇರುವಾಗಲೇ ಹಝ್ರತ್ ಉಮರ್(ರ) ಜನರೊಡನೆ ಎಷ್ಟು ಕಠಿಣವಾಗಿ ವರ್ತಿಸುತ್ತಾರೆ ಎಂದು ನೀವು ನೋಡುತ್ತಿದ್ದೀರಿ. ಹೀಗಿರುವಾಗ ಅವರು ಮಾತ್ರವಿರುವಾಗ ಏನು ಸ್ಥಿತಿಯಾಗಿರುವುದು ಮತ್ತು ನೀವು ಅಲ್ಲಾಹನನ್ನು ಭೇಟಿಯಾಗುವಾಗ ಅಲ್ಲಾಹನು ನಿಮ್ಮೊಡನೆ ಪ್ರಜೆಗಳ ಕುರಿತು ಕೇಳುವನು. ಇದನ್ನು ಆಲಿಸಿಕೊಂಡು ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಅಲ್ಲಾಹನನ್ನು ಭೇಟಿಯಾಗುವ ಕುರಿತು ನನ್ನನ್ನು ನೀವು ಹೆದರಿಸುತ್ತಿದ್ದೀಯಾ? ನನ್ನ ಪ್ರಭು ಉಮರರ ಕುರಿತು ಕೇಳಿದರೆ, ನಾನು ಅದಕ್ಕೆ ಉತ್ತರವಾಗಿ ಹೀಗೆ ಹೇಳುವೆನು: "ನಾನು ನಿನ್ನ ದಾಸರಲ್ಲಿ ಅತ್ಯಂತ ಶ್ರೇಷ್ಠನನ್ನು ನಿನ್ನ ದಾಸರ ಮೇಲೆ ಖಲೀಫರನ್ನಾಗಿ ಮಾಡಿರುವೆನು." ಅನಂತರ ಹಝ್ರತ್ ಉಸ್ಮಾನ್‌ರನ್ನು ಹಝ್ರತ್ ಅಬೂಬಕರ್(ರ) ಕರೆದು ಹಝ್ರತ್ ಉಮರರ(ರ) ಪರವಾಗಿ ಹೀಗೆ ವಸಿಯ್ಯತ್ ಬರೆಸಿದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಇದು ಮುಸ್ಲಿಮರ ಹೆಸರಲ್ಲಿ ಅಬೂಬಕರ್ ಬಿನ್ ಖಹಾಫ ಮಾಡುವ ವಸಿಯ್ಯತ್ ಆಗಿದೆ. ಇಷ್ಟು ಹೇಳಿದ ಕೂಡಲೇ ಹಝ್ರತ್ ಅಬೂಬಕರ್(ರ) ಪ್ರಜ್ಞಾಹೀನರಾದರು. ಆಗ ಹಝ್ರತ್ ಉಸ್ಮಾನ್(ರ) ತನ್ನಷ್ಟಕ್ಕೆ ಹೀಗೆ ಬರೆದರು: ನಾನು ಹಝ್ರತ್ ಉಮರ್ ಬಿನ್ ಖತ್ತಾಬ್‌ರನ್ನು ಖಲೀಫರನ್ನಾಗಿ ಮಾಡುತ್ತಿದ್ದೇನೆ ಮತ್ತು ನಾನು ನಿಮ್ಮ ಕುರಿತು ಒಳಿತು ಮಾಡುವುದರಲ್ಲಿ ಯಾವುದೇ ಕೊರತೆಯನ್ನು ಮಾಡಿಲ್ಲ. ಅನಂತರ ಹಝ್ರತ್ ಅಬೂಬಕರ್(ರ) ಗುಣಮುಖರಾದಾಗ, "ನೀವು ಏನು ಬರೆದಿರಿ" ಎಂದು ಅವರು ಹಝ್ರತ್ ಉಸ್ಮಾನ್‌ರೊಡನೆ ಕೇಳಿದರು. ಬರೆದದ್ದನ್ನು ಹಝ್ರತ್ ಉಸ್ಮಾನ್(ರ) ಓದಿ ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಅಲ್ಲಾಹು ಅಕ್ಬರ್ ಎಂದು ಹೇಳುತ್ತಾ ಹೇಳಿದರು: ನಾನು ಈ ಪ್ರಜ್ಞಾವಸ್ಥೆಯಲ್ಲೇ ಮೃತಪಟ್ಟರೆ ಜನರ ನಡುವೆ ಭಿನ್ನಾಭಿಪ್ರಾಯ ಉಂಟಾಗುವುದು ಎಂಬ ಭಯದಿಂದ ನೀವು ಹಾಗೆ ಬರೆದಿರಿ ತಾನೇ? ಹೌದೆಂದು ಹಝ್ರತ್ ಉಸ್ಮಾನ್(ರ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನು ನಿಮಗೆ ಇಸ್ಲಾಂ ಮತ್ತು ಮುಸ್ಲಿಮರ ಕಡೆಯಿಂದ ಪ್ರತಿಫಲ ನೀಡಲಿ.
(ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ–2, ಪುಟ–

272-273, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಉಮರರ ಹೆಸರನ್ನು ಹಝ್ರತ್ ಉಸ್ಮಾನ್(ರ) ಬರೆದ ಬಗ್ಗೆ ಹಝ್ರತ್ ಅಬೂಬಕರ್(ರ) ವಿರೋಧಿಸಲಿಲ್ಲ. ಹಝ್ರತ್ ಉಸ್ಮಾನ್ ಬರೆದ ಲಿಖಿತದಲ್ಲಿ ಅವರು ಯಾವುದೇ ಬದಲಾವಣೆಯನ್ನು ಮಾಡಲಿಲ್ಲ. ತಾರೀಖ್ ಅತ್ತಿಬರಿನಲ್ಲಿ ಹೀಗೆ ಬರೆಯಲಾಗಿದೆ ಮುಹಮ್ಮದ್ ಬಿನ್ ಇಬ್ರಾಹೀಮ್ ಬಿನ್ ಹಾರಿಸ್ ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್(ರ)ರವರು ಹಝ್ರತ್ ಉಸ್ಮಾನ್(ರ)ರವರನ್ನು ಪ್ರತ್ಯೇಕವಾಗಿ ಕರೆಸಿ ಹೇಳಿದರು ಬರೆಯಿರಿ ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್. ಈ ವಸಿಯ್ಯತ್ ಅಬೂಬಕ್ಕರ್ ಬಿನ್ ಅಬೂ ಖಹಾಫದ ಕಡೆಯಿಂದ ಮುಸ್ಲಿಮರಿಗಾಗಿದೆ. ವರದಿಗಾರರು ಹೇಳುತ್ತಾರೆ ತದನಂತರ ಹಝ್ರತ್ ಅಬೂಬಕ್ಕರ್(ರ) ರವರು ಪ್ರಜ್ಞಹೀನರಾದರು. ಮೊದಲು ಹೇಳಿದ ಹಾಗೆ ಆಯಿತು ಅಂದರೆ ಹಝ್ರತ್ ಅಬೂಬಕ್ಕರ್(ರ) ಅವರಿಗೆ ಪ್ರಜ್ಞೆ ಬಂದಾಗ ಅವರು ಹಝ್ರತ್ ಉಸ್ಮಾನ್(ರ) ಅವರಿಗೆ ಬರೆದದನ್ನು ಓದುವುದಕ್ಕೆ ಹೇಳಿದರು. ಅದನ್ನು ಆಲಿಸಿದ ನಂತರ ಹಝ್ರತ್ ಅಬೂಬಕ್ಕರ್(ರ)ರವರು ಅಲ್ಲಾಹು ಅಕ್‌ಬರ್ ಎಂದು ಹೇಳಿದರು. ತದನಂತರ ಹಝ್ರತ್ ಅಬೂಬಕ್ಕರ್(ರ) ಹೇಳಿದರು ಅಲ್ಲಾಹನು ನಿಮಗೆ ಇಸ್ಲಾಮ್ ಮತ್ತು ಮುಸ್ಲಿಮರ ಕಡೆಯಿಂದ ಪ್ರತಿಫಲ ನೀಡಲಿ ಎಂದು ಹೇಳಿ ಹಝ್ರತ್ ಅಬೂಬಕ್ಕರ್(ರ) ಆ ಬರವಣಿಗೆಯನ್ನು ಹಾಗೆಯೇ ಇರಿಸಿದರು ಅದರಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-353, 13 ಹಿಜಿರಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಒಂದು ವರದಿಯಲ್ಲಿ ಹಝ್ರತ್ ಅಬೂಬಕ್ಕರ್(ರ)ರವರು ಹಝ್ರತ್ ಉಸ್ಮಾನ್(ರ) ಅವರನ್ನು ಕರೆಸಿ ಹೇಳಿದರು ನನಗೆ ಖಲೀಫರನ್ನಾಗಿ ನೇಮಿಸಲು ಯಾವಯದಾದರು ವ್ಯಕ್ತಿಯ ಹೆಸರನ್ನು ಹೇಳಿರಿ ಎಂದರು. ಅಲ್ಲಾಹನಆಣೆ!! ನೀವು ನನ್ನ ಪ್ರಕಾರ ಸಲಹೆ ಸೂಚಿಸಲು ಉತ್ತಮ ವ್ಯಕ್ತಿಯಾಗಿದ್ದೀರಿ. ಅದಕ್ಕೆ ಹಝ್ರತ್ ಉಸ್ಮಾನ್(ರ) ಹೇಳಿದರು ಹಝ್ರತ್ ಉಮರ್. ಹಝ್ರತ್ ಅಬೂಬಕ್ಕರ್ ಹೇಳಿದರು ಬರೆಯಿರಿ ಆಗ ಅವರು ಬರೆಯಲು ಪ್ರಾರಂಭಿಸಿದರು ಅವರು ಹೆಸರು ಬರೆಯುವಷ್ಟರಲ್ಲಿ ಹಝ್ರತ್ ಅಬೂಬಕ್ಕರ್(ರ) ಪ್ರಜ್ಞಹೀನರಾದರು, ತದನಂತರ ಹಝ್ರತ್ ಅಬೂಬಕ್ಕರ್(ರ) ಗುಣಮುಖರಾದಾಗ ಅವರು ಹೇಳಿದರು ಉಮರ್(ರ) ಎಂದು ಬರೆಯಿರಿ.

ಮತ್ತೊಂದು ವರದಿಯಲ್ಲಿ ಹೀಗೆ ಬರುತ್ತದೆ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ ಹಝ್ರತ್ ಅಬೂಬಕ್ಕರ್(ರ) ರವರ ವಸಿಯ್ಯತನ್ನು ಹಝ್ರತ್ ಯುಸ್ಮಾನ್(ರ) ಬರೆಯುತ್ತಿದ್ದರು. ಆಗ ಹಝ್ರತ್ ಅಬೂಬಕ್ಕರ್(ರ) ಪ್ರಜ್ಞಹೀನರಾದರು. ಹಝ್ರತ್ ಉಸ್ಮಾನ್(ರ)ರವರು ಹಝ್ರತ್ ಉಮರ್(ರ)ರವರ ಹೆಸರನ್ನು ಬರೆದರು. ಹಝ್ರತ್ ಅಬೂಬಕ್ಕರ್(ರ) ಅವರು ಗುಣಮುಖರಾದಾಗ ಅವರು ಕೇಳಿದರು ಏನು ಬರೆದಿದ್ದೀರಿ? ಹಝ್ರತ್ ಉಸ್ಮಾನ್(ರ) ಹೇಳಿದರು ನಾನು ಉಮರ್ ಎಂದು ಬರೆದಿದ್ದೇನೆ. ಆಗ ಹಝ್ರತ್ ಅಬೂಬಕ್ಕರ್(ರ) ಹೇಳಿದರು ನೀವು ನಾನು ನಿಮಗೆ ಹೇಲ ಬಯುಸಿದ್ದನ್ನೇ ಬರೆದಿದ್ದೀರಿ ಎಂದು ಹೇಳಿದರು. ಒಂದು ವೇಳೆ ನೀವು ನಿಮ್ಮ ಹೆಸರು ಬರೆದಿದ್ದರೂ ನೀವೂ ಅದಕ್ಕ ಅರ್ಹರಿದ್ದೀರಿ. (ಸೀರತ್ ಉಮರ್ ಬಿನ್ ಖತ್ತಾಬ್‌ಅಝ್. ಇಬ್ನೆ ಜೌಝಿ, ಪುಟ-44-45)

ಒಂದು ವರದಿಯು ಹೀಗಿದೆ ಹಝ್ರತ್ ಅಬೂಬಕ್ಕರ್(ರ)ರವರು ಅನಾರೋಗ್ಯಗೊಂಡಾಗ ತಾವು ಹಝ್ರತ್ ಅಲಿ(ರ), ಹಝ್ರತ್ ಉಸ್ಮಾನ್(ರ) ಹಾಗೂ ಮುಹಾಜಿರೀನ್ ಮತ್ತು ಅನ್ಸಾರರ ಕೆಲವು ಜನರನ್ನು ಹೀಹೆ ಹೇಳಿ ಕಳುಹಿಸಿದರು: ನೀವು ನೋಡುತ್ತಿರುವ ಹಾಗೆ ಈಗ ಸಮಯ ಬಂದಿದೆ ನಿಮ್ಮನ್ನು ಆದೇಶ ನೀಡಲು ಯಾರು ನಿಂತಿಲ್ಲ. ನೀವು ಬಯಸಿದ್ದಲ್ಲಿ ನಿಮ್ಮಿಂದಲೇ ಯಾರನ್ನಾದರು ಆಯ್ದುಕೊಳ್ಳಿ. ಆಗ ಅವರೆಲ್ಲರು ಹೇಳಿದರು: ನೀವು ಸ್ವತಃ ನಮಗಾಗಿ ಆಯ್ದು ಕೊಡಿ. ಆಗ ಹಝ್ರತ್ ಅಬೂಬಕ್ಕರ್(ರ) ಹಝ್ರತ್ ಉಸ್ಮಾನ್(ರ) ಅವರನ್ನು ಉದ್ದೇಶಿಸಿ ಹೇಳಿದರು "ಇದು ಅಬೂಬಕರ್ ಬಿನ್ ಖಹಾಫ ಈ ಲೋಕದಿಂದ ಹೋಗುವಾಗ ಮಾಡುವ ಕೊನೆಯ ವಸಿಯ್ಯತ್ ಆಗಿದೆ. ಅಲ್ಲಾಹನಲ್ಲದೆ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವನ ದಾಸನೂ ಪ್ರವಾದಿಯೂ ಆಗಿದ್ದಾನೆ. ನಾನು ಖಲೀಫರನ್ನಾಗಿ ನಿಶ್ಚಯಿಸುತ್ತೇನೆ. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಪ್ರಜ್ಞಾಹೀನರಾದರು. ಹಝ್ರತ್ ಉಸ್ಮಾನ್(ರ) ಸ್ವತಃ ಹಝ್ರತ್ ಉಮರರ ಹೆಸರನ್ನು ಬರೆದರು. ಹಝ್ರತ್ ಅಬೂಬಕರ್(ರ) ಗುಣಮುಖರಾದಾಗ ಹಝ್ರತ್ ಉಸ್ಮಾನ್‌ರೊಡನೆ ಏನು ಬರೆದಿದ್ದೀರಿ ಎಂದು ಕೇಳಿದರು. ಹಝ್ರತ್ ಉಮರ್ ಬಿನ್ ಖತ್ತಾಬ್‌ರ ಹೆಸರನ್ನು ಬರೆದಿದ್ದೇನೆ ಎಂದು ಹಝ್ರತ್ ಉಸ್ಮಾನ್(ರ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನು ನಿಮ್ಮ ಮೇಲೆ ಕರುಣೆದೋರಲಿ. ನೀವು ನಿಮ್ಮ ಹೆಸರನ್ನು ಬರೆದಿದ್ದರೂ ಅದಕ್ಕೆ ನೀವು ಅರ್ಹನಾಗಿದ್ದೀರಿ. ನನ್ನ ನಂತರ ನಾನು ಉಮರ್ ಬಿನ್ ಖತ್ತಾಬ್‌ರನ್ನು ಖಲೀಫರನ್ನಾಗಿ ನಿಶ್ಚಯಿಸಿದ್ದೇನೆ ಮತ್ತು ನಿಮಗಾಗಿ ಅವರನ್ನು ಖಲೀಫರನ್ನಾಗಿ ಮಾಡುವುದರಲ್ಲಿ ನನಗೆ ಸಂತೃಪ್ತಿಯಿದೆ. (ಸಹೀಹ್ ತಾರೀಖ್ ಅತ್ತಿಬರಿ, ಸಂಪುಟ-3, ಪುಟ-126 ಅಡಿಟಿಪ್ಪಣಿ, ದಾರ್ ಇಬ್ನೆ ಕಸೀರ್ ದಮಿಶ್ಕ್ 2007)

ವಸಿಯ್ಯತ್ ಬರೆದ ನಂತರ ಅದನ್ನು ಜನರಿಗೆ ಓದಿ ಹೇಳಲು ಹಝ್ರತ್ ಉಸ್ಮಾನ್(ರ) ಅವರೊಡನೆ ಹಝ್ರತ್ ಅಬೂಬಕರ್(ರ) ಹೇಳಿದರು. ಹಝ್ರತ್ ಉಸ್ಮಾನ್(ರ) ಜನರನ್ನು ಒಟ್ಟುಸೇರಿಸಿದರು ಮತ್ತು ತಾನು ಸ್ವತಂತ್ರಗೊಳಿಸಿದ ಗುಲಾಮನ ಕೈಯಲ್ಲಿ ಪತ್ರವನ್ನು ಕೊಟ್ಟರು. ಜನರ ಮುಂದೆ ಪತ್ರವನ್ನು ಓದಿ ಹೇಳಲಾಯಿತು ಮತ್ತು ಅವರು ಅದನ್ನು ಅನುಸರಿಸಿದರು. ಹಝ್ರತ್ ಅಬೂಬಕರ್(ರ) ಜನರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ನಾನು ಖಲೀಫರನ್ನಾಗಿ ನಿಶ್ಚಯಿಸಿದ ವ್ಯಕ್ತಿಯಲ್ಲಿ ನೀವು ಸಂತೃಪ್ತರೇ? ನಾನು ಯಾವುದಾದರೂ ಸಂಬಂಧದ ಕಾರಣದಿಂದ ಅವರನ್ನು ನಿಮ್ಮ ಮೇಲೆ ಖಲೀಫರನ್ನಾಗಿ ನಿಶ್ಚಯಿಸಲಿಲ್ಲ. ಅಲ್ಲಾಹನಾಣೆ, ನಾನು ಇದರ ಬಗ್ಗೆ ಆಲೋಚಿಸುವುದರಲ್ಲಿ ಯಾವುದೇ ಕೊರತೆಯನ್ನು ಮಾಡಿಲ್ಲ. ನಾನು ನಿಮ್ಮ ಮೇಲೆ ಹಝ್ರತ್ ಉಮರ್(ರ) ಅವರನ್ನು ಖಲೀಫರನ್ನಗಿ ನೇಮಿಸಿದ್ದೇನೆ ಆದ್ದರಿಂದ ಅವರ ಮಾತನ್ನು ಕೇಳಿರಿ ಮತ್ತು ಅನುಸರಿಸಿರಿ. ಆಗ ಜನರು ಹೇಳಿದರು: ನಾವು ಆಲಿಸಿದ್ದೇವೆ ಮತ್ತು ಅನುಸರಿಸಿದ್ದೇವೆ. ತದನಂತರ ಹಝ್ರತ್ ಅಬೂಬಕ್ಕರ್(ರ)ರವರು ಹಝ್ರತ್ ಉಮರ್(ರ) ಅವರನ್ನು ಕರೆದು ಹೇಳಿದರು ನಾನು ನಿಮ್ಮನ್ನು ಪ್ರವಾದಿ ಮುಹಮ್ಮದ್(ಸ)ರವರ ಸಹಾಬರ ಮೇಲೆ ಖಲೀಫರನ್ನಾಗಿ ನೇಮಿಸಿದ್ದೇನೆ ನೀವು ತಖ್ವ ಕೈಗೊಳ್ಳಲು ಮತ್ತು ಜನದೊಡನೆ ಸೌಮ್ಯವಾಗಿ ವರ್ತಿಸಲು ಉಪದೇಶಿಸಿದರು. ಮತ್ತೆ ಹೇಳಿದರು: ಉಮರ್! ಖಂಡಿತವಾಗಿಯೂ ಅಲ್ಲಾಹನ ಕೆಲವು ಹಕ್ಕುಗಳು ರಾತ್ರಿಯ ಹೊತ್ತಿನಲ್ಲಿವೆ ಅದನ್ನು ಅವನು ಹಗಲಿನಲ್ಲಿ ಸ್ವೀಕರಿಸುವುದಿಲ್ಲ ಅದೇ ರೀತಿ ಕೆಲವು ಹಗಲಿನ ಹಕ್ಕುಗಳಿವೆ ಅದನ್ನು ಅವನು ರಾತ್ರಿಯ ಹೊತ್ತಿನಲ್ಲಿ ಸ್ವೀಕರಿಸುವುದಿಲ್ಲ ಅದೇ ರೀತಿ (ಫರ್ಝ್)ಕಡ್ಡಾಯ ಕರ್ಮಗಳನ್ನು ಪೂರ್ಣಗೊಳಿಸುವ ತನಕ ನಫಿಲ್‌ಗಳನ್ನು ಸ್ವೀಕರಿಸುವುಸಿಲ್ಲ. ಯಾ ಉಮರ್! ಪುನರುತ್ಥಾನ ದಿನದಂದು ಮಾಪಕಗಳನ್ನು ತೂಗಿಸುವವರ ಮಾಪಕಗಳು ಸತ್ಯವನ್ನು ಅನುಸರಿಸುವವರಿಗಿಂತ ಭಾರವಾಗಿರುತ್ತದೆ ಎಂದು ನೀವು ನೋಡುತ್ತಿಲ್ಲವೇ? ಪುನರುತ್ಥಾನ ದಿನದಂದು ಸತ್ಯವನ್ನು ಅನುಸರಿಸುವವರ ಮಾಪಕಗಳು ಭಾರವಾಗಿರುತ್ತದೆ. ನಂತರ ಅವರು(ರ) ಹೇಳಿದರು ಮಾಪಕಗಳಿಗೆ ಈ ವಿಷಯವು ನಿಜವಾಗಿದೆ ಅಂದರೆ ನಾಳೆ ಅದರಲ್ಲಿ ಭಾರವಾಗಿರುವ ವಿಷಯಗಳನ್ನೇ ಇರಿಸಲುಗುವುದು. ಉಮರ್! ಪುನರುತ್ಥಾನ ದಿನದಂದು ಯಾರ ಮಾಪಕಗಳು ಹಗುರವಾಗಿರುತ್ತವೆ ಎಂದು ನೀವು ನೋಡುತ್ತಿಲ್ಲವೇ? ಅವರ ಸುಳ್ಳು ಮತ್ತು ಅವರ ಲಘುತನವನ್ನು ಅನುಸರಿಸುವ ಕಾರಣ, ಅಂದರೆ, ಅವರು ಸತ್ಯವನ್ನು ಅನುಸರಿಸುತ್ತಿಲ್ಲ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುತ್ತಿರಲಿಲ್ಲ, ಆದ್ದರಿಂದ ಪುನರುತ್ಥಾನ ದಿನದಂದು ಅವರ ಮಾಪಕಗಳು ಹಗುರವಾಗಿರುತ್ತವೆ. ಮತ್ತು ಮಾಪಕಗಳಿಗೆ ಈ ವಿಷಯವೂ ನಿಜವಾಗಿದೆ ಎಂದರೆ ಅದರಲ್ಲಿ ಸುಳ್ಳನ್ನು ಅನುಸರಿಸುವವರನ್ನು ಅದರಲ್ಲಿ ಇರಿಸಿದಾಗ ಅದು ಹಗುರವಾಗುವುದು. ಉಮರ್! ಸೌಮ್ಯವಾದ ಆಯತ್‌ಗಳು ತೀವ್ರವಾದ ಆಯತ್‌ಗಳೊಂದಿಗೆ ಅವತರಿಸಲಾಗಿದೆ ಮತ್ತು ತೀವ್ರವಾದ ಆಯುತ್‌ಗಳು ಸೌಮ್ಯವಾದ ಆಯುತ್‌ಗಳೊಂದಿಗೆ ಅವತೀರ್ಣವಾಗಿದೆ ಅದರ ಕಾರಣ ಮುಮಿನ್‌ಗಳು ಉತ್ಸಾಹ ಮತ್ತು ಭಯಭೀತರಾಗಬೇಕು. ಒಂದು ಕಡೆ, ಅವರು ಒಳ್ಳೆಯತನದ ಆಸೆ ಹೊಂದಿರಬೇಕು ಮತ್ತು ಮತ್ತೊಂದೆಡೆ, ಅವರು ಸರ್ವಶಕ್ತನಾದ ಅಲ್ಲಾಹನ ಭಯವನ್ನು ಹೊಂದಿರಬೇಕು ಮತ್ತು ಅಲ್ಲಾಹನೊಂದಿಗೆ ಯಾವುದೇ ಸಂಬಂಧವಿಲ್ಲದ ಯಾವುದೇ ಆಸೆಯನ್ನು ಹೊಂದಿರಬಾರದು, ಅಥವಾ ಇರುವ ಸ್ವಂತ ಕೈಯಲ್ಲಿರುವ ಕಾರ್ಯಗಳಲ್ಲಿ ಯಾವುದಕ್ಕೂ ಅವರು ಭಯಪಡಬಾರದು. ಉಮರ್! ಅಲ್ಲಾಹನು ಬೆಂಕಿಯಲ್ಲಿರುವ ಜನರನ್ನು ಅವರ ದುಷ್ಕೃತ್ಯಗಳಿಂದ ಮಾತ್ರ ಉಲ್ಲೇಖಿಸುತ್ತಾನೆ ಎಂದು ನೀವು ನೋಡುತ್ತಿಲ್ಲವೇ? ಆದ್ದರಿಂದ ನೀವು ಅವರನ್ನು ಪ್ರಸ್ತಾಪಿಸಿದಾಗ, ಹೇಳಿ: ಖಂಡಿತವಾಗಿಯೂ ನಾನು ಅವರಲ್ಲ ಇಲ್ಲ ಎಂದು ನಾನು ಭಾವಿಸುತ್ತೇನೆ, ಮತ್ತು ಅಲ್ಲಾಹನು ಸ್ವರ್ಗದ ಜನರನ್ನು ಅವರ ಒಳ್ಳೆಯ ಕಾರ್ಯಗಳಿಂದ ಮಾತ್ರ ಪ್ರಸ್ತಾಪಿಸಿದ್ದಾನೆ, ಏಕೆಂದರೆ ಅಲ್ಲಾಹನು ಅವರ ದುಷ್ಕೃತ್ಯಗಳನ್ನು ಕ್ಷಮಿಸಿದ್ದಾನೆ. ಆದ್ದರಿಂದ ನೀವು ಅವರನ್ನು ಪ್ರಸ್ತಾಪಿಸಿದಾಗ, ಹೇಳಿ: "ನನ್ನ ಕಾರ್ಯಗಳು ಅವರಂತೆಯೇ ಇದ್ದೇಯೇ?" (ಅಲ್-ಕಾಮಿಲ್ ಫೀ

ಅಲ್-ತಾರಿಖ್ ಇಬ್ನ್ ಅಸೀರ್, ಸಂಪುಟ-2, ಪುಟಗಳು-273-274, ದಾರ್ ಅಲ್-ಕಿತಾಬ್ ಅಲ್-ಅಲಾಮಿಯಾ ಬೈರುತ್ ಲೆಬನಾನ್ 2003) ನಿಮ್ಮ ಮನಸ್ಸನ್ನು ಕೇಳಿರಿ.

ಹಝ್ರತ್ ಅಬೂಬಕ್ಕರ್[ರ]ರವರ ನಿಧನದ ಸಮಯ ಸಮೀಪಿಸಿದಾಗ, ಅವರು ಹೀಗೆ ಹೇಳುತ್ತಿದ್ದರು. ನಮ್ಮಲ್ಲಿರುವ ಮುಸ್ಲಿಮರ ಸಂಪತ್ತನ್ನು ಹಿಂದಿರುಗಿಸಿ. ನಾನು ಆ ಸಂಪತ್ತಿನಿಂದ ಏನನ್ನು ಪಡೆಯಲು ಬಯಸುವುದಿಲ್ಲ. ನನ್ನ ಆ ಜಮೀನು ಆ ಆ ಸ್ಥಳದಲ್ಲಿದೆ. ಮುಸ್ಲಿಮರಿಗೆ ನಾನು (ಬೈತುಲ್ ಮಾಲ್) ಖಜಾನೆಯಿಂದ ಜೀವನಾಂಶ ಎಂದು ತೆಗೆದುಕೊಂಡ ಆಸ್ತಿಗೆ ಪ್ರತಿಯಾಗಿ ನೀಡುವೆನು. ಭೂಮಿ, ಒಂಟೆ, ಕತ್ತಿ ಹಿಡಿಯುವ ಗುಲಾಮ ಮತ್ತು ಐದು ದಿರ್ಹಾಮ್‌ಗಳ ಚಾದರ ಎಲ್ಲವನ್ನೂ ಉಮರ್‌ಗೆ ನೀಡಲಾಯಿತು. ಈ ಎಲ್ಲ ಸಂಗತಿಗಳನ್ನು ನೋಡಿದ ಹಝ್ರತ್ ಉಮರ್, ಹಝ್ರತ್ ಅಬೂಬಕರ್[ರ] ತನ್ನ ಉತ್ತರಾಧಿಕಾರಿಯನ್ನು ತೊಂದರೆಗೆ ಸಿಲುಕಿಸಿದ್ದಾರೆ ಎಂದು ಹೇಳಿದರು.
(ಅತ್ತಬಖಾತುಲ್ ಕುಬ್ರಾ ಇಬ್ನ್ ಸಾಅದ್, ಸಂಪುಟ-3, ಪುಟ-143, ದಾರುಲ್ ಕುತುಬ್ ಇಲ್ಮಿಯ ಬೈರುತ್ 1990)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಹೇಳುತ್ತಾರೆ: ಯಾರೋ ಒಬ್ಬರು ಹಝ್ರತ್ ಉಮರ್‌ರೊಡನೆ ಕೇಳಿದರು: ಇಸ್ಲಾಮಿಗೆ ಮುಂಚೆ ನಿಮ್ಮ ಸ್ವಭಾವದಲ್ಲಿ ಕಾಣುತ್ತಿದ್ದ ಕಾಠಿಣ್ಯ ಅಥವಾ ಕೋಪ ಈಗ ಕಾಣುವುದಿಲ್ಲ. ಆಗ ಹಝ್ರತ್ ಉಮರ್[ರ] ಹೀಗೆ ಉತ್ತರ ಕೊಟ್ಟರು: ಕೋಪ ಈಗಲೂ ಇದೆ. ಆದರೆ ಅದು ಈಗ ಸತ್ಯನಿಷೇಧಿಗಳ ವಿರುದ್ಧ ತೋರಿಸಲಾಗುತ್ತದೆ. (ಹಖಾಎಖುಲ್ ಫುರ್‌ಖಾನ್, ಸಂಪುಟ-1. ಪುಟ-206)

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಅಬೂಬಕರ್‌ರೊಡನೆ ಜನರು ಹೀಗೆ ಹೇಳಿದ್ದರು: ನೀವು ನಿಮ್ಮ ನಂತರ ಹಝ್ರತ್ ಉಮರರನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದ್ದೀರಿ. ಇದರಿಂದ ಬಹಳ ಅಪಾಯವುಂಟಾಗುವುದು. ಏಕೆಂದರೆ ಅವರು ಬಹಳ ಕೋಪಗೊಳ್ಳುವವರಾಗಿರುವರು. ಹಝ್ರತ್ ಅಬೂಬಕರ್[ರ] ಹೇಳಿದರು: ನಾನು ಹೋಗುವ ತನಕ ಮಾತ್ರ ಅವರ ಕೋಪ ಇರುವುದು. ನನ್ನ ಮರಣದ ನಂತರ ಅವರು ಸ್ವತಃ ಸೌಮ್ಯಶೀಲರಾಗುವರು.
(ಅನ್ವಾರೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ-3, ಪುಟ-151)

ಹಝ್ರತ್ ಉಮರರ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಇಸ್ಲಾಂ ಸ್ವೀಕರಿಸುವುದಕ್ಕೆ ಮುಂಚೆ ನೀವು ಬಹಳ ಕೋಪಗೊಳ್ಳುತ್ತಿದ್ದೀರಿ ಎಂದು ಯಾರೋ ಒಬ್ಬರು ಹಝ್ರತ್ ಉಮರ್‌ರೊಡನೆ ಹೇಳಿದರು. ಆಗ ಹಝ್ರತ್ ಉಮರ್[ರ] ಹೇಳಿದರು: ಕೋಪ ಈಗಲೂ ಇದೆ. ಆದರೆ ಮೊದಲು ಸರಿಯಾದ ಸಂದರ್ಭದಲ್ಲಿ ಆಗಿರಲಿಲ್ಲ. ಈಗ ಸರಿಯಾದ ಸಮಯ ಮತ್ತು ಸಂದರ್ಭದಲ್ಲಿ ಕೋಪಪಡುತ್ತೇನೆ. (ಅಹ್ಮದಿ ಔರ್ ಗೈರ್ ಅಹ್ಮದಿ ಮೇ ಕ್ಯಾ ಫರ್ಕ್ ಹೈ, ರೂಹಾನಿ ಖಝಾಈನ್, ಸಂಪುಟ-20, ಪುಟ-487)

ಜಾಮಿ ಬಿನ್ ಶಿದಾದ್ ತನ್ನ ನಿಕಟ ಸ್ನೇಹಿತನಿಂದ ವರದಿ ಮಾಡುತ್ತಾರೆ. ಹಝ್ರತ್ ಉಮರ್[ರ] ಹೀಗೆ ದುಆ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ: ಹೇ ಅಲ್ಲಾಹ್, ನಾನು ದುರ್ಬಲನು, ನನ್ನನ್ನು ಶಕ್ತಿಶಾಲಿಯನ್ನಾಗಿ ಮಾಡು. ನಾನು ಕಠಿಣ ಸ್ವಭಾವದವನಾಗಿರುವೆನು, ನನ್ನನ್ನು ಸೌಮ್ಯ ಸ್ವಭಾವದವನನ್ನಾಗಿ ಮಾಡು. ನಾನು ಜಿಪುಣನಾಗಿರುವೆನು, ನನ್ನನ್ನು ಉದಾರಿಯನ್ನಾಗಿ ಮಾಡು.

ಹಝ್ರತ್ ಉಮರ್[ರ] ಖಲೀಫರಾದ ನಂತರ ಮಾಡಿದ ಮೊದಲ ಭಾಷಣದ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಹಝ್ರತ್ ಉಮರ್[ರ] ಹೇಳಿದರು: ಅಲ್ಲಾಹನು ನಿಮ್ಮನ್ನು ನನ್ನ ಮೂಲಕ ಮತ್ತು ನನ್ನನ್ನು ನಿಮ್ಮ ಮೂಲಕ ಪರೀಕ್ಷಿಸುತ್ತಿದ್ದಾನೆ. ಅಲ್ಲಾಹನು ನನ್ನ ಇಬ್ಬರು ಸ್ನೇಹಿತರ ನಂತರ ನನ್ನನ್ನು ನಿಮಗಾಗಿ ಉಳಿಸಿದ್ದಾನೆ. ನನ್ನ ಮುಂದೆ ಇರಿಸಲಾಗುವ ನಿಮ್ಮ ಯಾವುದೇ ಕಾರ್ಯವನ್ನು ನಾನಲ್ಲದೇ ಬೇರೆ ಯಾರೂ ನೋಡುವುದಿಲ್ಲ. ಯಾವ ಕಾರ್ಯ ನನ್ನಿಂದ ದೂರವಿದೆಯೋ ಅದಕ್ಕಾಗಿ ನಾನು ಸಮರ್ಥರಾದ ಮತ್ತು ವಿಶ್ವಾಸಯೋಗ್ಯರಾದ ಜನರನ್ನು ನಿಶ್ಚಯಿಸುವೆನು. ಜನರು ಉತ್ತಮ ರೀತಿಯಲ್ಲಿ ವರ್ತಿಸಿದರೆ ನಾನು ಸಹ ಅವರೊಡನೆ ಉತ್ತಮವಾಗಿ ವರ್ತಿಸುವೆನು. ಜನರು ಕೆಡುಕು ಮಾಡಿದರೆ, ನಾನು ಅವರಿಗೆ ಶಿಕ್ಷೆ ನೀಡುವೆನು. ಅಲ್ಲಾಹನು ನಮ್ಮನ್ನು ಮತ್ತು ನಿಮ್ಮನ್ನು ಕ್ಷಮಿಸಲಿ.

ಜಾಮಿ ಬಿನ್ ಶಿದಾದ್ ತನ್ನ ತಂದೆಯವರಿಂದ ವರದಿ ಮಾಡುತ್ತಾರೆ ಹಝ್ರತ್ ಉಮರ್[ರ] ರವರು ಮೊದಲ ಬಾರಿಗೆ ಭಾಷಣ ನೀಡಿದಾಗ ಅವರ ಮೊದಲ ಪದಗಳು ಇದಾಗಿದ್ದವು ಅವರು ಹೇಳಿದರು: **ಅಲ್ಲಾಹುಮ್ಮ ಇನ್ನಿ ಶದೀದುನ್ ಫಲೈಯ್ಯಿನಿ ವ ಇನ್ನಿ ಝೀಫುನ್ ಫಖವ್ವಿನಿ ವ ಇನ್ನಿ ಬಖೀಲುನ್ ಫಸಖಿಯ್ಯಿ** ಅಂದರೆ ಹೇ ಅಲ್ಲಾಹ್, ನಾನು ದುರ್ಬಲನು, ನನ್ನನ್ನು ಶಕ್ತಿಶಾಲಿಯನ್ನಾಗಿ ಮಾಡು. ನಾನು ಕಠಿಣ ಸ್ವಭಾವದವನಾಗಿರುವೆನು, ನನ್ನನ್ನು ಸೌಮ್ಯ ಸ್ವಭಾವದವನನ್ನಾಗಿ ಮಾಡು. ನಾನು ಜಿಪುಣನಾಗಿರುವೆನು, ನನ್ನನ್ನು ಉದಾರಿಯನ್ನಾಗಿ ಮಾಡು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-208, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಜಾಮಿ ಬಿನ್ ಶಿದಾದ್ ತನ್ನ ತಂದೆಯವರಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ರವರು ಖಲೀಫರಾದಾಗ ವೇದಿಕೆಯ ಮೇಲೆ ಮೊದಲ ಬಾರಿ ಆಸೀನರಾದಾಗ ಹೀಗೆ ಹೇಳಿದರು: ನಾನು ಈಗ ಕೆಲವು ಪದಗಳನ್ನು ಉಚ್ಛರಿಸುವೆನು ಅದಕ್ಕೆ ನೀವೆಲ್ಲ ಆಮೀನ್ ಎಂದು ಹೇಳಿರಿ.....ಹುಸೈನ್ ಮುರ್ರಿ ಅವರು ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ರವರು ಹೇಳುತ್ತಾರೆ ಅರೇಬಿಯರ ಉದಾಹರಣೆ ಲಗಾಮಿನಲ್ಲಿ ಕಟ್ಟಲಾದ ಒಂಟೆಯ ಹಾಗೆಯಾಗಿದೆ. ಅದು ತನ್ನ ಯಜಮಾನನ ಹಿಂದೆ ನಡೆಯುತ್ತದೆ. ಆದ್ದರಿಂದ ಹೇಗೆ ನಡೆಸುತ್ತಿದ್ದೇನೆ ಎಂದು ಯಜಮಾನನು ಸ್ವತಃ ನೋಡಬೇಕು. ನನ್ನ ಬಗ್ಗೆ ಹೇಳುವುದಾದರೆ ನಾನು ಖಂಡಿತವಾಗಿಯೂ ಅವರನ್ನು ಸರಿಯಾದ ಮಾರ್ಗದಲ್ಲಿ ಇರಿಸುವೆನು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-355, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1987)

ಹಝ್ರತ್ ಉಮರ್(ರ) ರವರು ಖಲೀಫರಾದ ನಂತರ ಮೂರನೇ ದಿನ ವಿಶದವಾದ ಭಾಷಣವನ್ನು ಮಾಡಿದರು. ಅದರಲ್ಲಿ ಅಲ್ಲಾಹನ ಸ್ತುತಿಸ್ತೋತ್ರಗಳನ್ನು ಮಾಡಿದ ಮೇಲೆ ರಸೂಲುಲ್ಲಾಹ್(ಸ) ರವರ ಮೇಲೆ ದುರೂದ್ ಪ್ರಾರ್ಥನೆಗಳನ್ನು ಪಠಿಸಿದ ನಂತರ ಹೀಗೆ ಹೇಳಿದರು: ಜನರು ನನ್ನ ಕಠಿಣ ಸ್ವಭಾವದ ಕಾರಣದಿಂದ ಹೆದರುತ್ತಿದ್ದಾರೆ ಎಂದು ನನಗೆ ಮಾಹಿತಿ ಲಭಿಸಿದೆ. ಹಝ್ರತ್ ಪೈಗಂಬರರ[ಸ] ಕಾಲದಲ್ಲೂ ಮತ್ತು ಅಬೂಬಕರರ ಖಿಲಾಫತ್ ಕಾಲದಲ್ಲೂ ನಾನು ಖಂಡಿತವಾಗಿಯೂ ಅವರಿಬ್ಬರ ಕೈಗಳಲ್ಲಿ ಇರುವ ತೆರೆದ ಖಡ್ಗದಂತಿದ್ದೆ. ಅವರು ಬಯಸುವಾಗ ನನ್ನನ್ನು ಕವಚದಲ್ಲಿ ಇರಿಸುತ್ತಿದ್ದರು ಮತ್ತು ಬಯಸುವಾಗ ನನ್ನನ್ನು ತೆರೆದು ಬಿಡುತ್ತಿದ್ದರು. ಎಲೈ ಜನರೇ, ನಾನು ನಿಮ್ಮ ಕಾರ್ಯಗಳ ಅಧಿಕಾರಿಯಾಗಿರುವೆನು. ಆದ್ದರಿಂದ ಈಗ ನಾನು ಆ ಕಾಠಿಣ್ಯವನ್ನು ಕಡಿಮೆಗೊಳಿಸಿದ್ದೇನೆ. ಈಗ ಅದು ಮುಸ್ಲಿಮರ ಮೇಲೆ ದೌರ್ಜನ್ಯ ಮಾಡುವವರ ಮತ್ತು ಮುಸ್ಲಿಮರ ವಿರುದ್ಧ ಕೈಯೆತ್ತುವವರ ವಿರುದ್ಧ ಪ್ರಕಟವಾಗುವುದು. ಸಾತ್ವಿಕರಾದ, ಧರ್ಮಿಷ್ಠರಾದ ಮತ್ತು ಶ್ರೇಷ್ಠರಾದ ಜನರೊಂದಿಗೆ, ಅವರು ಪರಸ್ಪರ ತೋರಿಸುವ ಸೌಮ್ಯ ಸ್ವಭಾವಕ್ಕಿಂತ ಹೆಚ್ಚು ಮೃದುವಾಗಿ ನಾನು ಅವರೊಡನೆ ವರ್ತಿಸುವೆನು. ಎಲೈ ಜನರೇ, ಯುದ್ಧ ಸಂಪತ್ತು ಮತ್ತು ನಿಮ್ಮ ಮೇಲೆ ಖರ್ಚು ಮಾಡಬೇಕಾದ ಸಂಪತ್ತಿನಲ್ಲಿ ಯಾವುದನ್ನೂ ರಹಸ್ಯವಾಗಿ ಇಡದಂತೆ ನೋಡಲು ನಿಮಗೆ ಹಕ್ಕಿದೆ. ನಿಮ್ಮ ಪಿಂಚಣಿ ಮತ್ತು ನಿಮ್ಮ ದಿನಸಿಗಳನ್ನು ನಿಮಗೆ ನಾನು ಕೊಡುವೆನು, ನೀವು ನಾಶವಾಗದಂತೆ ನಾನು ನೋಡುವೆನು, ನೀವು ಸೈನ್ಯದಲ್ಲಿ ಇರುವ ಕಾರಣದಿಂದ ಮನೆಯಲ್ಲಿ ಇಲ್ಲದಿರುವಾಗ ನಿಮ್ಮ ಮಕ್ಕಳ ತಂದೆಯಾಗಿ ನಾನು ಇರುವೆನು. (ಇಝಾಲತುಲ್ ಖಿಲಫಾ ಅನ್ ಖಿಲಾಫತುಲ್ ಖಿಲಫಾ, ಅನುವಾದ ಶಾಹ್ ವಲೀಉಲ್ಲಾಹ್ ಮುಹದ್ದಿಸ್ ದೆಹಲ್ವಿ, ಸಂಪುಟ-3, ಪುಟ-226-228, ಖದೀಮಿ ಕುತುಬ್ ಖಾನ ಕರಾಚಿ)

ಹಝ್ರತ್ ಉಮರರ ಖಿಲಾಫತ್ ಕಾಲಘಟ್ಟದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಮುಸ್ಲಿಮರ ಕಣ್ಣುಗಳ ಮುಂದೆ ಸದಾ ಈ ಆಯತುಗಳು ಇರುತ್ತಿದ್ದುವು. ಅದೇನೆಂದರೆ, **ತುಅದ್ದುಲ್ ಅಮಾನತ ಇಲಾ ಅಹ್ಲಿಹಾ**. ಎಂದರೆ, ಅಧಿಕಾರ ನಡೆಸಲು ಅರ್ಹರಾದವರಿಗೆ ಅದನ್ನು ಒಪ್ಪಿಸಬೇಕು. ಅದೇ ರೀತಿಯಲ್ಲಿ ಯಾರಿಗೆ ಈ ಅಧಿಕಾರ ಸಿಗುತ್ತದೋ ಅವರು ಶರೀಅತಿನ ಆಜ್ಞೆಗಳನ್ನು ಸದಾ ಕಣ್ಣುಗಳ ಮುಂದೆ ಇರಿಸುತ್ತಾ ಪ್ರಾಮಾಣಿಕತೆ ಮತ್ತು ನ್ಯಾಯದಿಂದ ಆಡಳಿತ ನಡೆಸಬೇಕು. ನೀವು ನ್ಯಾಯದಿಂದ ವರ್ತಿಸದಿದ್ದರೆ, ಪ್ರಾಮಾಣಿಕತೆಯಿಂದ ಕೆಲಸ ಮಾಡದಿದ್ದರೆ ಅದರ ಬಗ್ಗೆ ಅಲ್ಲಾಹನು ಲೆಕ್ಕ ತೆಗೆಯುವನು ಮತ್ತು ನಿಮ್ಮನ್ನು ಶಿಕ್ಷಿಸುವನು. ಈ ಆಯತ್ತಿನಲ್ಲಿರುವ ಸಂಗತಿಗಳು ಹಝ್ರತ್ ಉಮರರ ಮೇಲೆ ಪ್ರಭಾವ ಬೀರಿತ್ತು. ಇಸ್ಲಾಮಿನ ಎರಡನೇ ಖಲೀಫರಾದ ಹಝ್ರತ್ ಉಮರ್[ರ] ಇಸ್ಲಾಂ ಮತ್ತು ಮುಸ್ಲಿಮರ ಅಭಿವೃದ್ಧಿಗಾಗಿ ಎಷ್ಟು ತ್ಯಾಗಗಳನ್ನು ಮಾಡಿದ್ದರು ಎಂದರೆ, ಹಝ್ರತ್ ಪೈಗಂಬರರ[ಸ] ಬಗ್ಗೆ ಆಕ್ಷೇಪಗಳನ್ನು ಎತ್ತುವ ಯುರೋಪಿಯನ್ ಸಾಹಿತಿಗಳು ಕೂಡ ಹಝ್ರತ್ ಅಬೂಬಕರ್[ರ] ಮತ್ತು ಹಝ್ರತ್ ಉಮರರ[ರ] ಬಗ್ಗೆ ಪ್ರಸ್ತಾಪಿಸುವಾಗ ಹೀಗೆ ಒಪ್ಪುತ್ತಾರೆ: ಈ ವ್ಯಕ್ತಿಗಳು ಮಾಡಿದಂತಹ ಪರಿಶ್ರಮ ಮತ್ತು ತ್ಯಾಗದ ಉದಾಹರಣೆ

ಲೋಕದ ಅಧಿಕಾರಿಗಳಲ್ಲಿ ಯಾರಲ್ಲೂ ಕಾಣಲು ಸಿಗುವುದಿಲ್ಲ. ಹಝ್ರತ್ ಉಮರ್‌ರ ಬಗ್ಗೆ ಅವರು ಹೀಗೆ ಹೇಳುತ್ತಾರೆ: ಅವರು ಇಸ್ಲಾಮಿನ ಶರೀಅತಿನ ಪ್ರಚಾರ ಮತ್ತು ಮುಸ್ಲಿಮರ ಅಭಿವೃದ್ಧಿಗಾಗಿ ದಿನರಾತ್ರಿ ಕಾರ್ಯನಿರತರಾಗಿದ್ದರು. ಇಷ್ಟೆಲ್ಲ ಕೆಲಸಗಳನ್ನು ಮಾಡಿದ ನಂತರವೂ, ಸಾವಿರಾರು ತ್ಯಾಗಗಳನ್ನು ಮಾಡಿದ ನಂತರವೂ ಸಾವಿರಾರು ಕಷ್ಟತೆಗಳನ್ನು ಅನುಭವಿಸಿದ ನಂತರವೂ ಹಝ್ರತ್ ಉಮರ್[ರ] ಹಾಸಿಗೆಯಲ್ಲಿ ಮರಣ ಸಮೀಪವಾದ ಕಾರಣ ಮಲಗಿಕೊಂಡು ಬಹಳ ನೋವಿನಿಂದ ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ನೀನು ನನಗೆ ಈ ಅಧಿಕಾರವನ್ನು ನೀಡಿದ್ದೆ. ಒಂದು ಅಮಾನತ್ತನ್ನು ನನಗೆ ಒಪ್ಪಿಸಿದ್ದೆ. ನಾನು ಆಡಳಿತದ ಹಕ್ಕನ್ನು ನಿರ್ವಹಿಸಿರುವನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈಗ ನನ್ನ ಮರಣ ಸಮೀಪವಾಗಿದೆ. ನಾನು ಲೋಕವನ್ನು ಬಿಟ್ಟು ನಿನ್ನ ಬಳಿಗೆ ಬರುತ್ತಿದ್ದೇನೆ. ಎಲೈ ನನ್ನ ಪ್ರಭೂ, ನಾನು ನನ್ನ ಸತ್ಕರ್ಮಗಳಿಗೆ ಯಾವುದೇ ಉತ್ತಮ ಪ್ರತಿಫಲವನ್ನು ಬೇಡುವುದಿಲ್ಲ. ಯಾವುದೇ ಕೊಡುಗೆಯನ್ನು ಬಯಸುದಿಲ್ಲ. ನಾನು ಕೇಳುವುದೇನೆಂದರೆ, ನನ್ನ ಮೇಲೆ ಕರುಣೆದೋರಿಕೊಂಡು ನನ್ನನ್ನು ಕ್ಷಮಿಸು. ಈ ಕರ್ತವ್ಯ ನಿರ್ವಹಣೆಯಲ್ಲಿ ನನ್ನಿಂದ ಏನಾದರೂ ಕೊರತೆ ಉಂಟಾಗಿದ್ದರೆ, ನನ್ನನ್ನು ಕ್ಷಮಿಸು.

ನೋಡಿರಿ, ದೇಶದ ಒಳಿತಿಗಾಗಿ ಅವರು ಇಷ್ಟೆಲ್ಲ ಸೇವೆಗಳನ್ನು ಮಾಡಿದ್ದರೂ, ಎಷ್ಟೆಲ್ಲ ಸೇವೆಗಳು ಅವರು ಜನರ ಅಭಿವೃದ್ಧಿಗಾಗಿ ಮಾಡಿದ್ದರೂ, ಇಸ್ಲಾಮಿನ ಏಳಿಗೆಗಾಗಿ ಅವರು ಅನೇಕ ಸೇವೆಗಳನ್ನು ಮಾಡಿದ್ದರೂ ಅವುಗಳನ್ನೆಲ್ಲ ಅವರು ನಿಸ್ಸಾರವೆಂದು ಭಾವಿಸುತ್ತಿದ್ದರು. ಅವರು ಮಾಡಿದ ಸೇವೆಗಳು ದೇಶದ ಮುಸ್ಲಿಮರಿಗೆ ಉತ್ತಮವಾಗಿ ತೋರುತ್ತಿತ್ತು. ದೇಶದ ಅನ್ಯ ಸಮುದಾಯದವರು ಹಝ್ರತ್ ಉಮರ್[ರ] ಮಾಡಿದ ಸೇವೆಗಳನ್ನು ಉತ್ತಮವೆಂದು ಹೇಳುತ್ತಿದ್ದರು. ಮಾತ್ರವಲ್ಲ, ಈಗಲೂ ಹಝ್ರತ್ ಉಮರ್[ರ] ಮಾಡಿದ ಸೇವೆಗಳನ್ನು ಅತುಲ್ಯವೆಂದು ಜನರು ಹೇಳುತ್ತಾರೆ. ಆದರೆ ಈ ಎಲ್ಲ ಸೇವೆಗಳನ್ನು ಸ್ವತಃ ಉಮರ್[ರ] ಬಹಳ ನಿಸ್ಸಾರವಾಗಿ ಕಾಣುತ್ತಾರೆ ಮತ್ತು ನಡುಗುತ್ತಾ ಹೀಗೆ ಹೇಳುತ್ತಾರೆ: ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿರುವನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ನನ್ನ ಪ್ರಾರ್ಥನೆಯೇನೆಂದರೆ, ನೀನು ನನ್ನ ತಪ್ಪುಗಳನ್ನು ಕ್ಷಮಿಸು ಮತ್ತು ನನ್ನನ್ನು ಶಿಕ್ಷೆಯಿಂದ ಪಾರು ಮಾಡು. (ಇಸ್ಲಾಮ್ ಕಾ ಇಖ್ತಿಸಾದಿ ನಿಝಾಮ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–11–13)

ಹಝ್ರತ್ ಉಮರರ ನ್ಯಾಯಪಾಲನೆ ಮತ್ತು ಅಂತರ್ದೃಷ್ಟಿಗೆ ಕಾರಣ ಅವರಿಗೆ ಹಝ್ರತ್ ಪೈಗಂಬರರೊಂದಿಗೆ[ಸ] ಇದ್ದ ಅನುಸರಣೆ ಮತ್ತು ದೇವಭಯವಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಪೈಗಂಬರರ[ಸ] ಸಹವಾಸದಲ್ಲಿ ಸದಾ ಇರುವ ವ್ಯಕ್ತಿಯು ಹಝ್ರತ್ ಪೈಗಂಬರರ[ಸ] ಪಾದಗಳಲ್ಲಿ ಸ್ಥಾನ ಸಿಗಬೇಕೆಂದು ಮೃತಪಡುವಾಗ ಬಯಸುತ್ತಾನೆ. ಹಝ್ರತ್ ಪೈಗಂಬರ್[ಸ] ಅಲ್ಲಾಹನ ಸಂಪ್ರೀತಿಗಾಗಿ ಕೆಲಸ ಮಾಡುತ್ತಿರಲಿಲ್ಲವೆಂದು ಅವರ ಯಾವುದಾದರೂ ಕೃತ್ಯದಿಂದ ಸಾಬೀತಾಗಿದ್ದರೆ, ಹಝ್ರತ್ ಉಮರ್[ರ] ಉನ್ನತ ಪದವಿಯನ್ನು ತಲುಪಿದ ನಂತರವೂ ಹಝ್ರತ್ ಪೈಗಂಬರರ[ಸ] ಪಾದದಡಿಯಲ್ಲಿ ಸ್ಥಾನ ಸಿಗಬೇಕೆಂದು ಬಯಸುತ್ತಿದ್ದರೇ? (ದುನಿಯಾಂ ಕಾ ಮುಹ್ಸಿನ್, ಅನ್ವಾರುಲ್ ಉಲೂಮ್, ಸಂಪುಟ–10, ಪುಟ–262)

ಹಝ್ರತ್ ಪೈಗಂಬರರ[ಸ] ಕುಟುಂಬದೊಂದಿಗೆ ಹಝ್ರತ್ ಉಮರರಿಗೆ[ರ] ಇದ್ದ ಗೌರವಾದರದ ಕುರಿತು ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಪೈಗಂಬರರ[ಸ] ನಿಧನದ ನಂತರ ಹಝ್ರತ್ ಆಯಿಶ[ರ] ದೀರ್ಘಕಾಲ ಜೀವಿಸಿದ್ದರು. ಇರಾನಿನ ಮೇಲೆ ವಿಜಯ ಸಾಧಿಸಿದ ನಂತರ ಅಲ್ಲಿಂದ ಗೋಧಿಯನ್ನು ಮೃದುವಾದ ಹಿಟ್ಟನ್ನಾಗಿ ಮಾಡುವ ಬೀಸುಕಲ್ಲುಗಳನ್ನು ತರಲಾದಾಗ, ಮೊದಲ ಬಾರಿಗೆ ಅರೆಯಲಾದ ಗೋಧಿಹಿಟ್ಟನ್ನು ಹಝ್ರತ್ ಉಮರ್[ರ] ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹುರಿಗೆ ಕಳುಹಿಸಿದರು. ಹಝ್ರತ್ ಪೈಗಂಬರರೊಂದಿಗೆ[ಸ] ಹಝ್ರತ್ ಆಯಿಶಗೆ ಇದ್ದ ಪ್ರೀತಿ ಪ್ರೇಮದ ಕಾರಣದಿಂದ ಆ ಹಿಟ್ಟಿನಿಂದ ಮಾಡಲಾದ ರೊಟ್ಟಿಯ ಒಂದು ತುತ್ತನ್ನು ಬಾಯಿಗೆ ಹಾಕಿದ ಕೂಡಲೇ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಯಾರ ಕಾರಣದಿಂದ ನಮಗೆ ಈ ಅನುಗ್ರಹಗಳು ಸಿಕ್ಕಿತೋ ಅವರಿಗೆ ಈ ವರದಾನಗಳು ಸಿಗಲಿಲ್ಲ. ಆದರೆ ನಾವು ಈ ವರದಾನಗಳನ್ನು ಉಪಯೋಗಿಸುತ್ತಿದ್ದೇವೆ.

ಹಝ್ರತ್ ಉಮರ್[ರ] ಜನರಿಗೆ ಪಿಂಚಣಿಗಳನ್ನು ನಿಶ್ಚಯಿಸಿದಾಗ ಹಝ್ರತ್ ಪೈಗಂಬರರ[ಸ] ಅತ್ಯಂತ ನಿಕಟ ಸಂಬಂಧಿಕರಿಂದ ಆರಂಭಿಸಿದರು. ಅವರು ಮೊದಲು ಹಝ್ರತ್ ಅಬ್ಬಾಸ್[ರ] ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಸಿಗಬೇಕಾದ ಭಾಗವನ್ನು ನಿಶ್ಚಯಿಸಿದರು.

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಇಮಾಂ ಹಸನ್ ಮತ್ತು ಇಮಾಂ ಹುಸೈನ್‌ರನ್ನು ಬಹಳ ಗೌರವಿಸುತ್ತಿದ್ದರು, ಅವರನ್ನು ಸವಾರಿ ಮಾಡಿಸುತ್ತಿದ್ದರು, ಅವರ ತಂದೆಗೆ ಕೊಡುವ ರೀತಿಯಲ್ಲೇ ಅವರಿಗೂ ಕಾಣಿಕೆಗಳನ್ನು ಕೊಡುತ್ತಿದ್ದರು. ಒಂದು ಸಲ ಯಮನಿನಿಂದ ಕೆಲವು ಬಟ್ಟೆಗಳು ಬಂದಿದುವು. ಹಝ್ರತ್ ಉಮರ್[ರ] ಅವುಗಳನ್ನು ಸಹಾಬರ ಮಕ್ಕಳಿಗೆ ವಿತರಿಸಿದರು. ಹಝ್ರತ್ ಹಸನ್ ಮತ್ತು ಹಝ್ರತ್ ಹುಸೈನ್‌ರಿಗೆ ಕೊಡಲಿಲ್ಲ ಮತ್ತು ಹೀಗೆ ಹೇಳಿದರು: ಇವರಿಗೆ ಕೊಡಲು ಯೋಗ್ಯವಾದಂತಹ ಬಟ್ಟೆಗಳು ಇದರಲ್ಲಿ ಇಲ್ಲ. ಅನಂತರ ಯಮನಿನಲ್ಲಿರುವ ಪ್ರತಿನಿಧಿಗೆ ಸಂದೇಶ ಕಳುಹಿಸಿ ಅವರಿಬ್ಬರಿಗಾಗಿ ಉತ್ತಮ ಬಟ್ಟೆಗಳನ್ನು ತರಿಸಿದರು.

ಈ ಪ್ರಸ್ತಾಪ ಮುಂದುವರೆಯುವುದು. ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಜುಮಾ ನಮಾಝ್‌ ನಂತರ ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಅವರಲ್ಲಿ ಮೊದಲ ಪ್ರಸ್ತಾಪ ಮಾಜಿ ನಾಝಿರ್ ಬೈತುಲ್ ಮಾಲ್ ಆದ ದಿವಂಗತ ದರ್ವೇಶ್ ಫೈಝ್ ಅಹ್ಮದ್ ಗುಜ್ರಾತಿಯವರ ಪತ್ನಿಯಾದ ಸುಹೈಲ ಮಹ್‌ಬೂಬ್‌ರದ್ದಾಗಿದೆ. 90ನೇ ವಯಸ್ಸಿನಲ್ಲಿ ಇವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಬಿಹಾರಿನ ವಿದ್ಯಾವಂತ ಮನೆತನಕ್ಕೆ ಸೇರಿದವರಾಗಿದ್ದರು. ಅವರ ತಂದೆ ಅಹ್ಮದಿಯಾಗಿರಲಿಲ್ಲ. ಆದರೆ ಅವರ ತಾಯಿಯ ತಂದೆ ಬೈಅತ್ ಮಾಡಿದ ನಂತರ ಅವರ ತಾಯಿ ಸ್ವತಃ ಓದಿ ಅಹ್ಮದಿಯಾಗಿದ್ದರು. ಮೂರ್‍ನಾಲ್ಕು ವರ್ಷಗಳ ಕಾಲ ಅವರ ಗಂಡನ ಉಪೇಕ್ಷೆಯ ಕಾರಣದಿಂದ ಬಹಳ ಕಷ್ಟತೆಗಳನ್ನು ಅನುಭವಿಸಿದ್ದರು. ಆದರೆ ಅಹ್ಮದಿಯ್ಯತ್ತಿನಲ್ಲಿ ಸ್ಥೈರ್ಯದಿಂದ ಇದ್ದರು. ಅವರ ಗಂಡ ಅಹ್ಮದಿಯಂತು ಆಗಿರಲಿಲ್ಲ ಆದರೆ ವಿರೋಧವನ್ನು ನಿಲ್ಲಿಸಿದರು. ಅವರ ಪುತ್ರಿಯರ ವೈವಾಹಿಕ ಸಂಬಂಧಗಳು ಸಹ ಅಹ್ಮದಿ ಮನೆತನಗಳಲ್ಲಿ ನಡೆದವು. ಹೀಗೆ ಸುಹೈಲ ಸಾಹಿಬರ ವೈವಾಹಿಕ ಸಂಬಂಧವು ಅಹ್ಮದೀ ಮನೆತನದಲ್ಲಿ ಆಯಿತು. 1958ರಲ್ಲಿ ದಿವಂಗತರ ತಾಯಿ ಮೊದಲ ಬಾರಿಗೆ ಮಗಳಾದ ಸುಹೈಲ ಮಹ್‌ಬೂಬರೊಂದಿಗೆ ಖಾದಿಯಾನಿಗೆ ಹೋದರು. ಸುಹೈಲ ಸಾಹಿಬ ಹೇಳುತ್ತಿದ್ದರು. ಅವರಿಗೆ ಖಾದಿಯಾನಿನೊಂದಿಗೆ ಬಹಳ ಸ್ನೇಹಸಂಬಂಧವುಂಟಾಯಿತು. ಹೇಗಾದರೂ ಖಾದಿಯಾನಿನಲ್ಲೇ ಇರಲು ಬಹಳ ದುಆ ಮಾಡಿದರು. ಅವರು ಜೀವಿತವನ್ನು ವಖ್ಫ್ ಮಾಡಿದರು. ಆ ಸಮಯದಲ್ಲಿ ನಾಝಿರ್ ಖಿದ್‌ಮತೇ ದರ್ವೇಶ್ ಆಗಿದ್ದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಅವರ ವಖ್‌ಫಿನ ಪತ್ರಕ್ಕೆ ಹೀಗೆ ಉತ್ತರ ಕೊಟ್ಟರು: ನೀವು ವಖ್‌ಫ್ ಮಾಡಿರುವುದರ ಬಗ್ಗೆ ನನಗೆ ತಿಳಿದಿದೆ. ನಿಮ್ಮ ಈ ತೀರ್ಮಾನ ಬಹಳ ಶ್ಲಾಘನೀಯವಾದುದಾಗಿದೆ. ವಖ್‌ಫ್ ಮಾಡಿರುವ ಕಾರಣದಿಂದ ನಿಮ್ಮ ಮೊದಲ ಕರ್ತವ್ಯವೇನೆಂದರೆ, ಧಾರ್ಮಿಕ ಅರಿವನ್ನು ಕಲಿಯಬೇಕು. ಅತ್ಯುತ್ತಮ ಮಾದರಿ ಸ್ಥಾಪಿಸಲು ನಿಮ್ಮ ಕೃತ್ಯಗಳನ್ನು ಇಸ್ಲಾಂ ಮತ್ತು ಅಹ್ಮದಿಯ್ಯತ್ ಪ್ರಕಾರ ಮಾಡಬೇಕು. ಹೀಗೆ 1964ರಲ್ಲಿ ಅವರ ವಖ್‌ಫ್ ಆದರು. 1964ರಲ್ಲಿ ದಿವಂಗತರ ವಿವಾಹ ಚೌಧರಿ ಅಬ್ದುಲ್ಲಾಹ್ ಸಾಹಿಬ್ ದರ್ವೇಶ್‌ರೊಂದಿಗೆ ನಡೆಯಿತು. ಅವರಿಂದ ಒಬ್ಬಳು ಮಗಳು ಜನಿಸಿತು. ಆದರೆ ಸ್ವಲ್ಪ ಕಾಲದ ನಂತರ ಅವರ ವಿವಾಹ ವಿಚ್ಛೇದನ ಆಯಿತು. ಅನಂತರ ಅವರ ಎರಡನೇ ವಿವಾಹ ದರ್ವೇಶ್ ಆದ ಚೌಧರಿ ಫೈಝ್ ಅಹ್ಮದ್ ಗುಜ್ರಾತಿ ಸಾಹಿಬ್‌ರೊಂದಿಗೆ ನಡೆಯಿತು. ಅವರಿಂದ ಒಬ್ಬ ಗಂಡುಮಗು ಜನಿಸಿತು. ಆದರೆ ಆ ಮಗು ಕಿರಿವಯಸ್ಸಿನಲ್ಲೇ ಮೃತಪಟ್ಟಿತು. ದಿವಂಗತರಿಗೆ ರಿಟಾಯರ್‌ಮೆಂಟಿನ ತನಕ ಸುಮಾರು 30 ವರ್ಷಗಳ ಕಾಲ ಖಾದಿಯಾನಿನ ನುಸ್ರತ್ ಹೈಸ್ಕೂಲಿನಲ್ಲಿ ಹೆಡ್‌ಮಾಸ್ಟರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತು.

ಎರಡನೇ ಜನಾಝ ಆಸ್ಟ್ರೇಲಿಯದಲ್ಲಿ ನಿಧನರಾದ ಮುಬಲ್ಲಿಗ್ ರಾಜ ಖುರ್‌ಶಿದ್ ಅಹ್ಮದ್ ಸಾಹಿಬ್ ಮುಬಲ್ಲಿಗ್‌ರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಮೂಸಿಯಾಗಿದ್ದರು. ಅವರಿಗೆ ಪಾಕಿಸ್ತಾನದಲ್ಲೂ ಮತ್ತು ಕಶ್ಮೀರದ ವಿವಿಧ ಪ್ರದೇಶಗಳಲ್ಲೂ ಮುರಬ್ಬಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ಧೈರ್ಯಶಾಲಿಯಾದ ಮುರಬ್ಬಿಯಾಗಿದ್ದರು. ಕಾಶ್ಮಿರದಲ್ಲಿ ಸೇವೆ ಸಲ್ಲಿಸುತ್ತಿದ್ದ ಕಾಲದಲ್ಲಿ ಅವರಿಗೆ ಬಹಳ ವಿರೋಧವನ್ನು ಎದುರಿಸಬೇಕಾಗಿ ಬಂದಿತು. 1974ರ ಗೊಂದಲಮಯ ಸ್ಥಿತಿಗತಿಯಲ್ಲಿ ಬಹಳ ಧೈರ್ಯದಿಂದ ವಿರೋಧವನ್ನು ಎದುರಿಸಿ ನಿಂತರು ಒಂದು ಮೀಟಿಂಗ್‌ನಲ್ಲಿ ಅವರ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರ] ಹೀಗೆ ಹೇಳಿದ್ದರು: ಅಲ್ಲಿ ನಮ್ಮೊಬ್ಬ

ಧೈರ್ಯಶಾಲಿ ಮುಬಲ್ಲಿಗ್ ಇದ್ದಾರೆ. ರಾಜ ಖುರ್ಶಿದ್ ಅಹ್ಮದ್ ಮುನೀರ್ ಸಾಹಿಬ್‌ರು ರಾವಲ್ಪಿಂಡಿಯಲ್ಲಿ ತನ್ನ ಒಂದು ಮನೆಯನ್ನು ಜಮಾಅತಿಗೆ ದಾನವಾಗಿ ನೀಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅರ ಕಾಲದಲ್ಲಿ ಅವರ ಈ ಕೊಡುಗೆಯನ್ನು ಸ್ವೀಕರಿಸಿಲಾಯಿತು. ಭಾರತ – ಪಾಕಿಸ್ತಾನದ ವಿಭಜನೆಯ ನಂತರ ರಾಜ ಸಾಹಿಬ್‌ರು ಅಹ್ಮದ್ ನಗರಿಗೆ ಹೋಗಿದ್ದರು. ಅಲ್ಲಿ ಅವರು ಜಾಮಿಅ ಅಹ್ಮದಿಯದಲ್ಲಿ ಕಲಿಯುತ್ತಿದ್ದರು. ಖರ್ಚುಗಳನ್ನು ಈಡೇರಿಸಲು ಒಂದು ಸಣ್ಣ ಕೊಠಡಿಯಲ್ಲಿ ಅವರೊಂದು ಅಂಗಡಿಯನ್ನು ತೆರೆದರು. ಅನಂತರ 1948ರಲ್ಲಿ ಫುರ್ಖಾನ್ ಬಟಾಲಿಯನಿನಲ್ಲಿ ಸೇರಿದ್ದರು. 1949ರಲ್ಲಿ ಮೌಲವಿ ಫಾಝಿಲಿನ ಪರೀಕ್ಷೆಯನ್ನು ತೇರ್ಗಡೆ ಮಾಡಿದರು. ಜಾಮಿಅದ ಶಾಹಿದಿನ ಪರೀಕ್ಷೆಯನ್ನು ತೇರ್ಗಡೆ ಮಾಡಿದ ನಂತರ ಮುರಬ್ಬಿ ಆಗಿ ಪಾಕಿಸ್ತಾನದ ವಿವಿಧ ಪ್ರದೇಶಗಳಲ್ಲಿ ಮತ್ತು ಕಾಶ್ಮೀರದಲ್ಲಿ ಧಾರ್ಮಿಕ ಸೇವೆಗಳನ್ನು ಮಾಡಿದರು. 1974ರಲ್ಲಿ ಅವರ ಮನೆಯ ಮೇಲೆ ಹಲ್ಲೆ ನಡೆಯಿತು. ಆದರೆ ಅವರು ಬಹಳ ಧೈರ್ಯದಿಂದ ಅದನ್ನು ಎದುರಿಸಿದರು. ಜನಜಂಗುಳಿಯ ಕಲ್ಲೆಸತದಿಂದ ಗಾಯಾಳು ಸಹ ಆದರು. ಆದರೆ ಮನೆವರೆಲ್ಲರೂ ಸುರಕ್ಷಿತರಾದರು. ದೈವಿಕ ಜಮಾಅತಿಗೆ ಇಂತಹ ಪರೀಕ್ಷಣೆಗಳು ಬರುತ್ತವೆ, ಆಪತ್ತುಗಳು ಬರುತ್ತವೆ ಎಂದು ಹೇಳಿ ಸದಾ ಅವರೊಡನೆ ಸ್ಥೈರ್ಯವಾಗಿ ಇರಲು ಉಪದೇಶಿಸುತ್ತಿದ್ದರು: ಬಹಳ ಧೈರ್ಯದಿಂದ ಜಮಾಅತುಗಳಿಗೆ ಹೋಗುತ್ತಿದ್ದರು, ಜನರ ಮನೆಗಳಿಗೆ ಹೋಗುತ್ತಿದ್ದರು. ಹಲವು ಬಾರಿ ಹೀಗೆ ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಜನರು ಅವರನ್ನು ಹಿಡಿದು ಹೊಡೆಯುತ್ತಿದ್ದರು. ಯಾವತ್ತೂ ಅದರ ಬಗ್ಗೆ ದೂರುತ್ತಿರಲಿಲ್ಲ. ಅವರಿಗೆ ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರು ಇದ್ದಾರೆ.

ಮುಂದಿನ ಜನಾಝಾ ಝಮೀರ್ ಅಹ್ಮದ್ ನದೀಂ ಸಾಹಿಬ್‌ರದ್ದಾಗಿದೆ. ಅವರು 56ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ಕ್ಯಾನ್ಸರ್ ರೋಗವಿತ್ತು. ಅವರ ಕುಟುಂಬದಲ್ಲಿ ಅವರ ತಾತರಾದ ರಹೀಂ ಬಕ್ಷ್ ಸಾಹಿಬ್‌ರ ಮೂಲಕ 1897ರಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತು. ಅವರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯಾಗಿದ್ದರು. ಇಮಾಂ ಮಹ್‌ದಿ ಬಂದಿರುವರು ಎಂಬ ವಾರ್ತೆ ಅವರಿಗೆ ಲಭಿಸಿದಾಗ ಅವರು ಗುರುದಾಸಪುರ ಜಿಲ್ಲೆಯ ಶಿಕಾರ್‌ಪೂರ್ ಮಾಛಿಯ ಗ್ರಾಮದಿಂದ ಜಲ್ಸದಲ್ಲಿ ಭಾಗವಹಿಸಲು ಖಾದಿಯಾನಿಗೆ ಹೋದರು. ಅಲ್ಲೇ ಬೈಅತ್ ಮಾಡಿದರು. ಅನಂತರ ತನ್ನೊಬ್ಬ ಸ್ನೇಹಿತನಾದ ಮೆಹತ್‌ದೀನ್ ಸಾಹಿಬ್‌ರೊಡನೆ ಹೇಳಿದರು. ಅವರು ಸಹ ಬೈಅತ್ ಮಾಡಿದರು. ಅನಂತರ ಅವರ ತಬ್ಲೀಗ್‌ನಿಂದ ಬಹುತೇಕ ಗ್ರಾಮವಾಸಿಗಳು ಅಹ್ಮದಿಗಳಾದರು. ಝಮೀರ್ ಸಾಹಿಬ್‌ರು ಜಾಮಿಅ ಪಾಸ್ ಆದ ನಂತರ ಲೋಕಲ್ ಇಸ್ಲಾಹ್ ಇರ್‌ಶಾದ್‌ನ ಅಡಿಯಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿದರು. ಅನಂತರ ಮನ್ಸೂಬ ಬಂದಿ ಕಮಿಟಿ ಆಫಿಸಲ್ಲಿ ನಿಶ್ಚಯಿಸಲ್ಪಟ್ಟರು. ಅನಂತರ ನಝಾರತ್ ಇಸ್ಲಾಹೋ ಇರ್‌ಶಾದ್ ಮರ್ಕಝಿಯದ ಅಡಿಯಲ್ಲಿ ಸೌಭಾಗ್ಯ ಲಭಿಸಿತು. 2005ರಿಂದ ನಿಧನದ ತನಕ ಇಸ್ತಿಖ್‌ಬಾಲಿಯ ವಿಭಾಗದ ಮುಆವಿನ್ ನಾಝಿರ್ ವಸಿಯ್ಯತ್ ಆಗಿ ಸೇವೆ ಸಲ್ಲಿಸಿದರು. ಅಲ್ಲಾಹನು ಅವರಿಗೆ ಒಬ್ಬಳು ಮಗಳು ಮತ್ತು ಒಬ್ಬ ಮಗನನ್ನು ನೀಡಿದ್ದನು. ಅವರ ಮಗನು ಸಹ ಮುರಬ್ಬಿಯಾಗಿರುವರು. ಸಂಬಂಧಗಳನ್ನು ಬಹಳ ಉತ್ತಮವಾಗಿ ಸ್ಥಾಪಿಸುತ್ತಿದ್ದರು. ಉತ್ತಮ ಕ್ರೀಡಾಪಟು ಆಗಿದ್ದರು. ಬಾಸ್ಕಟ್ ಬಾಲ್ ಆಟವಾಡುವುದರಿಂದ ಸಂಬಂಧಗಳು ಆಗುತ್ತಿದ್ದುವು. ಆ ಸಂಬಂಧಗಳನ್ನು ಜಮಾಅತಿಗಾಗಿ ಉಪಯೋಗಿಸುತ್ತಿದ್ದರು. ಅದರಿಂದ ಪ್ರಯೋಜನ ಪಡೆಯುತ್ತಿದ್ದರು. ತಹಜ್ಜುದ್ ನಿರ್ವಹಿಸುತ್ತಿದ್ದರು. ಅಲ್ಲಾಹನ ಮೇಲೆ ಬಹಳ ಭರವಸೆ ಇರಿಸುತ್ತಿದ್ದರು. ಕಷ್ಟತೆಯ ಸಮಯಗಳಲ್ಲಿ ಬೇಗನೇ ಎರಡು ರಕಅತ್ ನಫಲ್ ನಮಾಝ್ ನಿರ್ವಹಿಸುವುದು ಮತ್ತು ಖಲೀಫತುಲ್ ಮಸೀಹಿಗೆ ಪತ್ರ ಬರೆಯುವುದು ಅವರ ಅಭ್ಯಾಸವಾಗಿತ್ತು. ಅಲ್ಲಾಹನ ಕೃಪೆಯಿಂದ ಅವರ ಪ್ರಾರ್ಥನೆಗಳನ್ನು ಮತ್ತು ನಫಲ್‌ಗಳನ್ನು ಅಲ್ಲಾಹನು ಸ್ವೀಕರಿಸುತ್ತಿದ್ದನು.

ಮುಂದಿನ ಜನಾಝಾ ತನ್ಸಾನಿಯದ ಸನ್ಮಾನ್ಯ ಈಸಾ ಮೂಕಿ ತುಲ್ಯೆಮ ಸಾಹಿಬ್‌ರದ್ದಾಗಿದೆ. ಕಳೆದ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಕ್ರೈಸ್ತ ಮನೆತನದಲ್ಲಿ ಜನಿಸಿದ್ದರು. ಸುತ್ತಮುತ್ತಲಿನ ವಾತಾವರಣದ ಕಾರಣದಿಂದ ಧಾರ್ಮಿಕ ಮಾತುಕತೆಯಲ್ಲಿ ಅಭಿರುಚಿ ಹೊಂದಿದ್ದರು. ಇಸ್ಲಾಂ ಸ್ವೀಕರಿಸುವ ಸೌಭಾಗ್ಯವನ್ನು ಪಡೆದರು. ಕೆಲವು ವರ್ಷಗಳ ನಂತರ ಜಮಾಅತಿನ ವಿಶ್ವಾಸದ ಬಗ್ಗೆ ಪರಿಚಯವಾಯಿತು. ಶೋಧನೆ ನಡೆಸಿದ ನಂತರ 1992ರಲ್ಲಿ ಬೈಅತ್ ಮಾಡಿಕೊಂಡು ಜಮಾಅತಿಗೆ ಪ್ರವೇಶಿಸಿದರು. ಬೈಅತ್ ಮಾಡಿದ ನಂತರ ದಿವಂಗತರ ಒಳಗೆ ಒಂದು ಪರಿಶುದ್ಧ ಬದಲಾವಣೆ ಉಂಟಾಯಿತು. ಅದು ಅವರ ನಿಕಟ ಬಂಧುಗಳಿಗೂ ಸ್ಪಷ್ಟವಾಗಿ ಕಾಣಬಹುದಾಗಿತ್ತು. ಅವರ ಈ ಪರಿಶುದ್ಧ ಬದಲಾವಣೆಯನ್ನು ಕಂಡುಕೊಂಡು ಅವರ ಪತ್ನಿ ಸಹ ಬೈಅತ್ ಮಾಡಿದರು. ಬೈಅತ್ ಮಾಡಿದ ನಂತರ ಅವರು ತಮ್ಮ ಧಾರ್ಮಿಕ ಅರಿವನ್ನು ವರ್ಧಿಸಲು ಬಹಳ ಪರಿಶ್ರಮಿಸಿದರು. ತನ್ನ ಕೆಲಸಗಳ ನಡುವೆ ಕೂಡ ಅಹ್ಮದಿಯ್ಯತ್ ಮತ್ತು ಇಸ್ಲಾಮಿನ ತಬ್ಲೀಗ್ ಮಾಡುವ ಅವಕಾಶವನ್ನು ಕೈಬಿಡುತ್ತಿರಲಿಲ್ಲ. ಚಂದಾಗಳನ್ನು ಕೊಡುವುದರಲ್ಲೂ ಸದಾ ಮುಂದಿದ್ದರು. ಅಲ್ಲಾಹನ ಮಾರ್ಗದಲ್ಲಿ ಕೊಡುವುದರಿಂದ ವ್ಯಾಪಾರ ಮತ್ತು ಸಂಪತ್ತಿನಲ್ಲಿ ಅನುಗ್ರಹ ಸುರಿಯಲ್ಪಡುತ್ತದೆ ಎಂದು ಅವರು ಹಲವು ಬಾರಿ ಹೇಳುತ್ತಿದ್ದರು. ಬಹಳ ಸ್ನೇಹಮಯಿ, ಹಸನ್ಮುಖಿ ಮತ್ತು ವಿನಯವಂತ ವ್ಯಕ್ತಿಯಾಗಿದ್ದರು. ವಖ್ಫೇ ಝಿಂದಗಿ, ಜಮಾಅತಿನ ಹುದ್ದೇದಾರರು ಮತ್ತು ಜಮಾಅತಿನ ಉದ್ಯೋಗಿಗಳನ್ನು ಬಹಳ ಗೌರವಿಸುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಎರಡು ಪತ್ನಿಯರನ್ನು ಮತ್ತು ಹತ್ತು ಮಕ್ಕಳನ್ನು ಅಗಲಿರುವರು. ತನ್ಸಾನಿಯದ ಮಿಶನರಿ ಇಂಚಾರ್ಜ್ ಅಮೀರ್ ಹೇಳುತ್ತಾರೆ: ದಿವಂಗತರನ್ನು ದಾರುಸ್ಸಲಾಮಿನ ರೀಜನಲ್ ಪ್ರೆಸಿಡಂಟ್ ಆಗಿ ನಿಶ್ಚಯಿಸಲಾಗಿತ್ತು. ಅವರ ಸರಳ ಸ್ವಭಾವಿಯಾಗಿದ್ದರು. ಆದ್ದರಿಂದ ಜನರು ಅವರನ್ನು ಪ್ರೀತಿಸುತ್ತಿದ್ದರು. ಮೌನವಾಗಿ ಸೇವೆ ಸಲ್ಲಿಸುವ ಹಿರಿಯ ವ್ಯಕ್ತಿಯಾಗಿದ್ದರು. ಅನಂತರ ಅವರು ತನ್ಸಾನಿಯದ ನಾಇಬ್ ಅಮೀರ್ ಆಗಿ ನಿಶ್ಚಯಿಸಲ್ಪಟ್ಟರು. ಈ ಕೆಲಸದಲ್ಲೂ ಬಹಳ ಉತ್ತಮವಾಗಿ ಸೇವೆ ಸಲ್ಲಿಸಿದರು. ಬಹಳ ಉತ್ತಮ ಸಲಹೆಗಾರರಾಗಿದ್ದರು. ಸದಾ ಜಮಾಅತಿನ ವ್ಯವಸ್ಥೆಯ ಗೌರವ ಮತ್ತು ಘನತೆಯ ಬಗ್ಗೆ ಗಮನವಹಿಸುತ್ತಿದ್ದರು. ಪರಸ್ಪರ ಸ್ನೇಹಾದರದಿಂದ ಇರಲು ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿಕೊಂಡು ಇರಲು ಅಹ್ಮದಿಯರನ್ನು ಸದಾ ಉಪದೇಶಿಸುತ್ತಿದ್ದರು. ಜಮಾಅತಿನ ಉದ್ಯೋಗಿಗಳ ವೈಯಕ್ತಿಕ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಸಾಧ್ಯವಾದ ಎಲ್ಲ ನೆರವನ್ನು ಮಾಡಲು ಪ್ರಯತ್ನಿಸುತ್ತಿದ್ದರು. ಮಾತ್ರವಲ್ಲ ಬಸ್ಸಿನಲ್ಲಿ ಹೋಗಿ ಜಮಾಅತಿನ ಉದ್ಯೋಗಿಗಳ ಸಮಯ ವ್ಯರ್ಥವಾಗದಿರಲು ಅವರನ್ನು ಬೆಳಿಗ್ಗೆ ತನ್ನ ವಾಹನದಲ್ಲಿ ತರುತ್ತಿದ್ದರು. ಅನಂತರ ಆಫಿಸಿಗೆ ತನ್ನ ಕೆಲಸಕ್ಕಾಗಿ ಹೋಗುತ್ತಿದ್ದರು. ನಮಾಝ್ ಸೆಂಟರ್ ಎಂಬ ರೀತಿಯಲ್ಲಿ ತನ್ನ ಮನೆಯಲ್ಲಿ ಒಂದು ಕೊಠಡಿಯನ್ನು ಇರಿಸಿದ್ದರು. ಅಲ್ಲಿ ನಮಾಝ್ ನಿರ್ವಹಿಸಲಾಗುತ್ತಿತ್ತು. ವಸಿಯ್ಯತ್ ಮಾಡಿದವರ ಸೊತ್ತಿನ ಚಂದಾವನ್ನು ನೀಡಲು ಮನವಿ ಮಾಡಲಾದಾಗ, ಅವರು ಎಲ್ಲರಿಗಿಂತ ಮೊದಲು ತನ್ನ ಸೊತ್ತಿನ ಚಂದವನ್ನು ಪಾವತಿ ಮಾಡಿದರು.

ಮುಂದಿನ ಜನಾಝಾ ಖಾದಿಯಾನಿನ ನಝಾಮತ್ ತಾಮೀರಾತಿನ ಸುಪರ್‌ವೈಸರ್ ಆದ ಶೇಖ್ ಮುಬಶ್ಶಿರ್ ಸಾಹಿಬ್‌ರದ್ದಾಗಿದೆ. ಅವರು ಒಡಿಶದ ಕೇರಂಗಿನ ಶೇಖ್ ಇಸ್ರಾರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಕೊರೊನದ ಕಾರಣದಿಂದ ಅವರು 33ನೇ ವಯಸ್ಸಿನಲ್ಲಿ ಕಳೆದ ದಿನಗಳಲ್ಲಿ ನಿಧನ ಹೊಂದಿದರು..... **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ಜನ್ಮತಃ ಅಹ್ಮದಿಯಾಗಿದ್ದರು. ಹಳೆಯ ಅಹ್ಮದೀ ಕುಟುಂಬದವರಾಗಿದ್ದರು. ಅತ್ಯಂತ ಉತ್ತಮ ಸ್ವಭಾವದ, ಧಾರ್ಮಿಕ ಸೇವೆಗಾಗಿ ತಯಾರಾಗಿರುವ ಜಮಾಅತಿನ ಸೇವಕರಾಗಿದ್ದರು. ಚಿಕ್ಕಂದಿನಿಂದಲೇ ಮಸೀದಿಯೊಂದಿಗೆ ವಿಶೇಷವಾದ ಸಂಬಂಧವನ್ನು ಹೊಂದಿದ್ದರು. ದಿವಂಗತರು 8 ವರ್ಷಗಳಿಂದ ಖಾದಿಯಾನನ ನಝಾಮತ್ ತಾಮೀರಾತಿನಲ್ಲಿ ಬಹಳ ಉತ್ತಮ ರೀತಿಯಲ್ಲಿ ಸುಪ್ಯೆರ್‌ವೈಸರಿಂಗ್ ಕೆಲಸ ಮಾಡುತ್ತಿದ್ದರು. ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದ್ದರು. ದಿವಂಗತರು ತನ್ನ ವಿಧವೆಯಾದ ಪತ್ನಿಯನ್ನು ಅಲ್ಲದೆ ತಂದೆತಾಯಂದಿರು, ಇಬ್ಬರು ಸಹೋದರರು ಮತ್ತು ಒಬ್ಬಳು ಸಹೋದರಿಯನ್ನು ಅಗಲಿರುವರು.

ಮುಂದಿನ ಜನಾಝಾ ಸನ್ಮಾನ್ಯ ಸೈಫಲಿ ಶಾಹಿದ್ ಸಾಹಿಬ್‌ರದ್ದಾಗಿದೆ. ಸಿಡ್ನಿಯಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್(ಅ) ಸಹಾಬಿಯರಾದ ಚೌಧರಿ ಮುಹಮ್ಮದ್ ಅಲಿ ಸಾಹಿಬ್ ಮತ್ತು ಚೌಧರಿ ಗಾಮೇಖಾನ್ ಸಾಹಿಬ್‌ರ ಮೊಮ್ಮಗರಾಗಿದ್ದರು. ಅವರ ಸಹೋದರ ಹೈದರ್ ಅಲಿ ಝಫರ್ ಸಾಹಿಬ್‌ರು ಜರ್ಮನಿಯ ಮುಬಲ್ಲಿಗ್ ಮತ್ತು ನಾಇಬ್ ಅಮೀರ್ ಆಗಿರುವರು. ಅವರು ಹೇಳುತ್ತಾರೆ: 1961ರಲ್ಲಿ ಅವರು ಮೆಟ್ರಿಕ್ ಮುಗಿಸಿ ಹೈದರಾಬಾದಿನಲ್ಲಿ ಉದ್ಯೋಗಿಯಾದರು. ಅನಂತರ ನಾವಿಬ್ಬರು ಸಹೋದರರ ಶಿಕ್ಷಣದ ಖರ್ಚನ್ನು ವಹಿಸುತ್ತಿದ್ದರು. ನಮ್ಮ ಖರ್ಚುವೆಚ್ಚಗಳನ್ನು ಸಹ ಪೂರೈಸುತ್ತಿದ್ದರು. ತಂದೆತಾಯಂದಿರನ್ನು ಪ್ರಾಮಾಣಿಕವಾಗಿ ಸೇವೆ ಮಾಡುತ್ತಿದ್ದರು. ಅತ್ಯಂತ ಸ್ನೇಹಮಯಿ, ಸೌಮ್ಯವಾಗಿ ಮಾತನಾಡುವವರು ಮತ್ತು ವಿನಯವಂತ ವ್ಯಕ್ತಿಯಾಗಿದ್ದರು. ಮಕ್ಕಳೊಂದಿಗೆ ಕರುಣೆಯೊಂದಿಗೆ ಮತ್ತು ಯುವಕರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಜಮಾಅತಿನ ವ್ಯವಸ್ಥೆ ಮತ್ತು ಖಿಲಾಫತಿನೊಂದಿಗೆ ಪ್ರೀತಿ ಮತ್ತು

ಅನುಸರಣೆಯ ಸಂಬಂಧವನ್ನು ಹೊಂದಿದ್ದರು. ಸದಾ ತನ್ನ ಮಕ್ಕಳೊಡನೆ ಸಹ ಖಿಲಾಫತ್‌ನೊಂದಿಗೆ ಪ್ರೀತಿ ಮತ್ತು ಅನುಸರಣೆಯಿಂದ ಇರಲು ಉಪದೇಶಿಸುತ್ತಿದ್ದರು. ಹುದ್ದೇದಾರರನ್ನು ಬಹಳ ಗೌರವಿಸುತ್ತಿದ್ದರು. ಹುದ್ದೇದಾರರ ವಿರುದ್ಧ ಯಾವುದೇ ಮಾತುಗಳನ್ನು ಕೇಳಲು ಇಷ್ಟಪಡುತ್ತಿರಲಿಲ್ಲ. ಬಹಳವಾಗಿ ದುಆ ಮಾಡುವ ವ್ಯಕ್ತಿಯಾಗಿದ್ದರು ತಹಜ್ಜುದ್ ನಿರ್ವಹಿಸುತ್ತಿದ್ದರು ಮತ್ತು ನಮಾಝುನ್ನು ಮನೋಹರವಾಗಿ ನಿರ್ವಹಿಸುತ್ತಿದ್ದರು. ಅವರು ಪಾಕಿಸ್ತಾನದಲ್ಲಿದ್ದಾಗ ಸೆಕ್ರಟರಿ ಮಾಲ್ ಮತ್ತು ಸೆಕ್ರಟರಿ ವಖ್‌ಫೇ ಜದೀದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಅನಂತರ ಮೀರ್‌ಪೂರ್‌ಖಾಸ್‌ನಲ್ಲಿ ಅವರನ್ನು ಜಮಾಅತಿನ ಸದರ್ ಆಗಿ ಖಲೀಫತುಲ್ ಮಸೀಹ್ ರಾಬಿ ನಿಶ್ಚಯಿಸಿದ್ದರು. ಅಲ್ಲಿ ಇಮಾರತ್ ಸ್ಥಾಪನೆಯಾಗುವ ತನಕ ಅವರು ಅಲ್ಲಿ ಸದರ್ ಆಗಿದ್ದರು. ಡಾಕ್ಟರ್ ಅಬ್ದುಲ್‌ಮನಾಫ್ ಸಿದ್ದೀಖಿ ಸಾಹಿಬ್‌ರ ಶಹಾದತಿನ ನಂತರ ಅವರಿಗೆ ಲೋಕಲ್ ಅಮೀರ್ ಮತ್ತು ಜಿಲ್ಲಾ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತು. ಆಸ್ಟ್ರೇಲಿಯಕ್ಕೆ ಹೋಗುವ ತನಕ ಅವರು ಅಲ್ಲಿ ಮೀರ್‌ಪೂರ್ ಖಾಸಿನ ಜಿಲ್ಲಾ ಅಮೀರ್ ಆಗಿದ್ದರು. ಶಾಖಾ ಸಂಘಟನೆಗಳಲ್ಲೂ ಅವರಿಗೆ ಸೇವೆ ಸಲ್ಲಿಸಲು ಸಾಕಷ್ಟು ಸೌಭಾಗ್ಯ ಸಿಕ್ಕಿತ್ತು. ಅದೇ ರೀತಿಯಲ್ಲಿ ಆಸ್ಟ್ರೇಲಿಯದಲ್ಲಿ ಖುದ್ದಾಮ್ ಬೋರ್ಡಿನ ಮೆಂಬರ್ ಆಗಿದ್ದರು ಮತ್ತು ಅನ್ಸಾರುಲ್ಲಾಹ್ ನಾಇಬ್ ಸದರ್ ಅವ್ವಲ್ ಆಗಿದ್ದರು. ಅದೇ ರೀತಿಯಲ್ಲಿ 2016ರಲ್ಲಿ ಸೆಕ್ರಟರಿ ರಿಶ್ತ ನಾತ ಎಂಬ ನೆಲೆಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರು ಮಕ್ಕಳು ಸಹ ಅವರ ಜೀವಿತದಲ್ಲೇ ಮೃತಪಟ್ಟರು. ಬಹಳ ತಾಳ್ಮೆಯಿಂದ ಅವರು ಈ ದುಃಖವನ್ನು ಸಹಿಸಿದರು. ದಿವಂಗತರು ಪತ್ನಿಯನ್ನಲ್ಲದೆ ನಾಲ್ವರು ಪುತ್ರರನ್ನು ಅಗಲಿರುವರು.

ಮುಂದಿನ ಜನಾಝ ಸನ್ಮಾನ್ಯ ರಶೀದ್ ಅಹ್ಮದ್ ಹಯಾತ್‌ರ ಮಗನಾದ ಸನ್ಮಾನ್ಯ ಮಸ್‌ಊದ್ ಅಹ್ಮದ್ ಹಯಾತ್ ಸಾಹಿಬ್‌ರದ್ದಾಗಿದೆ. ಅವರಿಗೆ 80 ವರ್ಷ ಪ್ರಾಯವಿದ್ದಿತ್ತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಚೌಧರಿ ಪೀರ್ ಬಕ್ಷ್ ಸಾಹಿಬ್‌ರ ಮಗನಾದ ಹಝ್ರತ್ ಬಾಬು ಉಮರ್ ಹಯಾತ್ ಸಾಹಿಬ್‌ರ ಮೂಲಕ ಆಗಿತ್ತು. ಉಮರ್ ಹಯಾತ್(ರ) 14ನೇ ವಯಸ್ಸಿನಲ್ಲಿ 1898ರಲ್ಲಿ ಬೈಅತ್ ಮಾಡಿಕೊಂಡು ಜಮಾಅತಿಗೆ ಪ್ರವೇಶಿಸಿದರು. ಮೊದಲು ಸೈನ್ಯದಲ್ಲಿ ಉದ್ಯೋಗ ಮಾಡುತ್ತಿದ್ದರು. ಅನಂತರ ಅವರು ಕೆನ್ಯಾಗೆ ಹೋದರು. 1967ರಲ್ಲಿ ಅವರು ಯು.ಕೆ.ಗೆ ಹೋದರು. ಅನಂತರ ಕೆನ್ಯಾದಲ್ಲಿ ಸ್ಥಿರವಾಸ ಮಾಡಿದರು. ಅತ್ಯಂತ ಪರಿಶುದ್ಧ ಸ್ವಭಾವದವರು, ಉಪವಾಸ ಮತ್ತು ನಮಾಝಿನ ಪಾಲನೆ ಮಾಡುವವರು ಆಗಿದ್ದರು ಸುಸ್ವಭಾವ, ಸ್ನೇಹಮಯಿ, ಅತಿಥಿ ಸತ್ಕಾರ ಮಾಡುತ್ತಿದ್ದ ಮತ್ತು ಕೃಪಾಳು ವ್ಯಕ್ತಿಯಾಗಿದ್ದರು. ಎರಡು ಬಾರಿ ಹಜ್ಜ್ ಮಾಡಲು ಸೌಭಾಗ್ಯ ಪಡೆದಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರೊಂದಿಗೆ ಅನೇಕ ದೇಶಗಳ ಪರ್ಯಟನೆ ವೇಳೆ ಡ್ರೈವಿಂಗ್ ಮತ್ತು ಸೆಕ್ಯೂರಿಟಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1983ರಲ್ಲಿ ಬೈತುಲ್ ಅಹದ್ ಮಸೀದಿಯ ಖರೀದಿಯ ವೇಳೆ ಅತ್ಯಂತ ಹೆಚ್ಚು ಭಾಗ ಅವರದ್ದು ಮತ್ತು ಅವರ ಪತ್ನಿಯಾದ ತಾಹಿರ ಹಯಾತ್ ಸಾಹಿಬರದ್ದಾಗಿತ್ತು. ಅಲ್ಲಾಹನು ಅವರನ್ನು ಸಾಂಪತ್ತಿಕವಾದ ನೆಲೆಯಲ್ಲಿ ವಿಶೇಷವಾಗಿ ಅನುಗ್ರಹಿಸಿದ್ದನು. ಆ ಸಂಪತ್ತಿನ ಹೆಚ್ಚಿನ ಭಾಗವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡುತ್ತಿದ್ದರು. ರೆಡ್ ಬರ್ಜ್ ಈಸ್ಟ್ ಲಂಡನಿನ ಜಮಾಅತ್ ಬೇರೆಯಾದಾಗ, ಆ ಜಮಾಅತಿನ ಬಳಿ ಯಾವುದೇ ಮಸೀದಿ ಇರಲಿಲ್ಲ. ಅವರಿಗೆ ಅದರ ಬಗ್ಗೆ ಗೊತ್ತಾದಾಗ ತನ್ನ ಮನೆಯ ಒಂದು ಭಾಗವನ್ನು ಜಮಾಅತಿಗಾಗಿ ವಖ್ಫ್ ಮಾಡಿದ್ದರು. ಅಲ್ಲಿ ಮೂರು ವರ್ಷಗಳ ಕಾಲ ಜಮಾಅತ್ ಸೆಂಟರ್ ನೆಲೆನಿಂತಿತ್ತು. ಜಮಾಅತಿನ ಅನೇಕ ಕೆಲಸಗಳು ಅಲ್ಲಿ ನಡೆಯುತ್ತಿತ್ತು. ಅವರಿಗೆ ಎರಡು ಮಕ್ಕಳಿರುವರು ಮತ್ತು ಎರಡನೇ ಪತ್ನಿಯಿರುವರು. ಮೊದಲ ಪತ್ನಿ ನಿಧನರಾಗಿದ್ದರು. ಅಲ್ಲಾಹನು ಈ ಎಲ್ಲ ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಸಂತಾನವನ್ನೂ ಅಹ್ಮದಿಯ್ಯತಿನೊಂದಿಗೆ ಜೋಡಿಸಿಡಲಿ. ಅವರ ದುಆಗಳು ಮುಂದಿನ ಸಂತಾನಗಳ ಪರವಾಗಿ ಸ್ವೀಕರಿಸಲ್ಪಡಲಿ. ನಮಾಝಿನ ನಂತರ ನಾನು ಹೇಳಿದಂತೆ ಅವರ ಜನಾಝ ನಮಾಝನ್ನು ನಿರ್ವಹಿಸುವೆನು.

*********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಂದ ಹಾಗೆ ಆ ಮೂಢನು ಕಾನೂನು ಹಾಗು ನ್ಯಾಯದ ವಿರುದ್ಧ ಮಾತನಾಡಿ, ಮನದಲ್ಲಿ ತಿಳಿದುಕೊಳ್ಳುತ್ತಾನೆ. ತನ್ನ ದೋಷಮುಕ್ತಿಗಾಗಿ ಏನೂ ಹೇಳದೇ ಕೇಳದೇ ಪಾರಾಗಬಹುದೆಂದು. ಅದೇ ರೀತಿ ಆಥಮ್ ಸಾಹಿಬರು ತಮ್ಮ ಭೋಳೆತನದಿಂದಾಗಿ ಪದೇ ಪದೇ ಇಂಜೀಲನ್ನು ಪ್ರಸ್ತುತಪಡಿಸುತ್ತಿದ್ದಾರೆ. ಅವರಿಗೆ ಈ ಆರೋಪದಿಂದ ಮುಕ್ತನಾಗುವ ಯಾವ ಚಿಂತೆಯೂ ಇಲ್ಲ. ಅದು ಸ್ವಯಂ ಅವರ ಹೇಳಿಕೆಯಿಂದ ಸಾಬೀತುಗೊಂಡಿದೆ. (ಅದೇ ಪುಟ 97)

ಆಥಮ್ ಸಾಹಿಬರ ಏಕಪಕ್ಷೀಯ ಹೇಳಿಕೆ ಅದು ಕೇವಲ ಅವರ ವಾದವು ಸ್ವೇಚ್ಛೆಚ್ಚಾರದಿಂದ ಕೂಡಿದೆ ಮತ್ತು ಘಟಿಸಿದ ವಿವರಗಳಿಗೆ ವಿರುದ್ಧವಾಗಿದೆ ಎಂದು ಸ್ವೀಕಾರ ಮಾಡಬಹುದು. ಯಾವ ನ್ಯಾಯಾಲಯ ಅದನ್ನು ಒಪ್ಪಬಹುದು. ಇದು ಅಲ್ಲಾಹನ ಅನುಗ್ರಹವಾಗಿದೆ. ಕೇವಲ ನಮ್ಮ ಭವಿಷ್ಯವಾಣಿಯ ಮೇಲೆ ಸಾಕ್ಷ್ಯವಿಲ್ಲದೆ ಆಥಮ ಸಾಹಿಬರು ಖುದ್ದಾಗಿ ಮೃತ್ಯುಭಯದ ವಿಷಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ ಮತ್ತು ತಮ್ಮ ಪತ್ರಿಕೆಗಳಲ್ಲಿ ಒಪ್ಪಿಕೊಂಡಿದ್ದಾರೆ. ಇದೀಗ ಈ ಎಲ್ಲಾ ಭಾರ ಆಥಮ್ ಸಾಹೇಬರ ಕುತ್ತಿಗೆ ಮೇಲಿದೆ. ತಮ್ಮ ಹೇಳಿಕೆಗಳಿಗೆ ಸಾಕ್ಷ್ಯ ಒದಗಿಸಬೇಕು. ಅಲ್ಲದೇ ಆಣೆ ಮಾಡುವ ಸರಳ ವಿಧಾನದಿಂದ ಅದು ನಮ್ಮ ದೃಷ್ಟಿಯಲ್ಲಿ ನಿಶ್ಚಿತವಾದ ಮತ್ತು ಖಾತರಿದಾಯಕ ಮಾರ್ಗವಾಗಿದೆ. ತೃಪ್ತಿಪಡಿಸಬೇಕು. ಅವರು ಭವಿಷ್ಯವಾಣಿಯ ನಿಮಿತ್ತ ಹೆದರಿಕೊಂಡಿಲ್ಲ. ಬದಲು ವಾಸ್ತವದಲ್ಲಿ ನಮ್ಮನ್ನು ಅವರು ಹತ್ಯೆಗಾರರೆಂದು ಭಾವಿಸುತ್ತಿದ್ದರು ಮತ್ತು ನಮ್ಮ ಖಡ್ಗಗಳ ಹೊಳಪನ್ನು ಕಾಣುತ್ತಿದ್ದರು. ನಾವು ಅವರಿಗೆ ಯಾವ ತೊಂದರೆಯೂ ನೀಡುವುದಿಲ್ಲ. ಬದಲು ನಾಲ್ಕು ಸಾವಿರ ರೂಪಾಯಿ ಅವರಿಗೆ ಒಪ್ಪಿಸುತ್ತೇವೆ. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–9, ಪುಟ–111)

**ಆಣೆ ಮಾಡಿದ ನಂತರ ಆಥಮರು ಒಂದು ವರ್ಷದವರೆಗೆ ಜೀವಂತರಾಗಿದ್ದರೆ ನಾನು ಯಾವ ಶಿಕ್ಷೆಯಾದರೂ ಅನುಭವಿಸಲು ಸಿದ್ಧನಿದ್ದೇನೆ.**

ಯಾರ ಕೈಯಲ್ಲಿ ನನ್ನ ಜೀವವಿದೆ ಅವನ ಆಣೆ ಮಾಡಿ ಹೇಳುತ್ತೇನೆ. ಆಥಮನು ಈಗಲೂ ಸಹ ನಾನು ಪ್ರಸ್ತುತಪಡಿಸಿದ ಪದಗಳಲ್ಲಿ ಸಾರ್ವಜನಿಕ ಮುಂದೆ ನನ್ನ ಸಮಕ್ಷಮದಲ್ಲಿ ಮೂರು ಬಾರಿ ಆಣೆ ಮಾಡಲಿ. ನಾವು ಆಮೀನ್ ಎಂದು ಹೇಳುವೆವು ಆಗ ಅದೇ ಸಮಯಕ್ಕೆ ನಾಲ್ಕು ಸಾವಿರ ರೂಪಾಯಿ ಅವರಿಗೆ ನೀಡುವೆನು. ಅದು ಆಣೆ ಮಾಡಿದ ತಾರೀಖಿನಿಂದಾಗಿರುತ್ತದೆ. ಅದಾದ ನಂತರ ಈ ಎಲ್ಲಾ ಸಮುದಾಯಗಳು ನನಗೆ ಯಾವ ಶಿಕ್ಷೆ ವಿಧಿಸಿದರೂ ನನ್ನನ್ನು ಖಡ್ಗದಿಂದ ಚೂರು ಚೂರು ಮಾಡಿದರೂ ಅಡ್ಡಿಪಡಿಸಲಾರೆನು. ಮತ್ತು ಲೋಕದಲ್ಲಿರುವ ಕಠಿಣ ಶಿಕ್ಷೆಗಳಲ್ಲಿ ಅತೀ ಕಠಿಣ ಶಿಕ್ಷೆ ನನಗೆ ನೀಡಿದರೂ ನಾನು ನಿರಾಕರಿಸಲಾರೆ. ಅವರು ಆಣೆ ಮಾಡಿದ ನಂತರ, ನನ್ನ ದಿವ್ಯವಾಣಿಯ ಪ್ರಕಾರ ತಾನು ಸುಳ್ಳೆಂದು ಸ್ಪಷ್ಟವಾದರೆ ಅದು ಸ್ವಯಂ ನನ್ನ ಅಪಮಾನವಾಗಿರುತ್ತದೆ. (ಝಿಯಾವುಲ್ ಹಖ್, ರೂಹಾನಿ ಖಝಾಇನ್, ಸಂಪುಟ–9, ಪುಟ–316)

**ಅಹ್ಮದ್ ಬೇಗ್ ಮರಣದ ಭವಿಷ್ಯವಾಣಿಯ ದೃಶ್ಯ ಆಥಮನ ಕಣ್ಣೆದುರಿಗಿತ್ತು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಅವರಿಗೆ ಅವರ ಭವಿಷ್ಯವಾಣಿಯ ಮೊದಲು, ಅಹ್ಮದ್ ಬೇಗ್ ಅವರ ಕುರಿತು ಮಾಡಲಾದ ಮರಣದ ಭವಿಷ್ಯವಾಣಿಯನ್ನು ನೂರ್‌ಅಫ್ಶಾಂ ಪತ್ರಿಕೆಯ ಸಂಪಾದಕರು ಮುದ್ರಿಸಿದ್ದರು. ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದು ಎಷ್ಟೊಂದು ನಿಖರವಾಗಿ ಪೂರ್ಣಗೊಂಡಿತು ಎಂಬುದನ್ನು ಅವರು ಅರಿತಿದ್ದರು. ಅಂದ ಹಾಗೆ ಅದೇ ಕಾರಣದಿಂದ ಈ ಭವಿಷ್ಯವಾಣಿಯ ದುಃಖ ಅವರ ಮನಸ್ಸಿಗೆ ತಾಗಿತ್ತು. ಏಕೆಂದರೆ ಭವಿಷ್ಯವಾಣಿಯು ಪೂರ್ಣಗೊಂಡ ಒಂದು ನಮೂನೆ ಅವರು ಕಂಡಿದ್ದರು. ಆದರೆ ನನ್ನ ಹತ್ಯೆಗಾರಿಕೆಯ ಕುರಿತು ಅವರ ಬಳಿ ಯಾವ ನಮೂನೆ ಮತ್ತು ಸಾಕ್ಷ್ಯವಿರಲಿಲ್ಲ. ಯಾರ ಬಗ್ಗೆ ನಾನು ಭವಿಷ್ಯವಾಣಿ ಮಾಡುತ್ತೇನೆ. ಅವರನ್ನು ಖುದ್ದಾಗಿ ಹತ್ಯೆ ಮಾಡುವ ಸಾಕ್ಷ್ಯ ಅವರ ಬಳಿ ಏನಾದರೂ ಇತ್ತೆ. ಹೀಗಿರುವಾಗ ವಿವೇಕನಾದವನೊಬ್ಬನು ಯೋಚಿಸಬಲ್ಲನು. ಯಾವ ಮಾತಿನ ಸ್ಪಷ್ಟ ನಮೂನೆ ಅವರ ಬಳಿಯಿತ್ತು. ಅಲ್ಲದೇ ಕ್ರೈಸ್ತ ಪತ್ರಿಕೆಗಳು ಸಹ ಅದಕ್ಕೆ ಸಾಕ್ಷ್ಯವಾಗಿದ್ದರು. ಅನುಭವಕ್ಕೆ ಬಂದ ಈ ಘಟನೆಯ ಪ್ರಭಾವ ಆಗದಿರಲು ಸಾಧ್ಯವೇ. ಅಂದ ಹಾಗೆ ಆ ಅನುಭವದ ಭಯ ಅವರ ಮನಸ್ಸಿನಲ್ಲಿತ್ತೇ ಹೊರತು ಹತ್ಯೆ ಮಾಡಿಸುವ ಭಯವಿರಲಿಲ್ಲ. ಅದನ್ನು ಸಾಕ್ಷ್ಯಪಡಿಸುವಂತಹ ಯಾವ ಆಧಾರವು ಅವರ ಬಳಿಯಿರಲಿಲ್ಲ. ಹಾಗಾಗಿ ಸಂಶಯಪಡಲು ಯಾವ ಕಾರಣವೂ ಇರಲಿಲ್ಲ.

ಭವಿಷ್ಯವಾಣಿ ಪೂರ್ಣಗೊಳ್ಳುವ ಪೂರ್ಣ ಭರವಸೆ ಆಥಮರಿಗೆ ಇತ್ತು. ಏಕೆಂದರೆ ಅಹ್ಮದ್ ಬೇಗ್‌ನ ಮೃತ್ಯುವಿನ ಬಗ್ಗೆಗಿನ ಭವಿಷ್ಯವಾಣಿ ಪೂರ್ಣಗೊಂಡಿದ್ದು ನನ್ನಿಂದ ಕೇಳಿಸಿಕೊಂಡಿದ್ದರು. ಅಷ್ಟೇ ಅಲ್ಲ ಆ ಭವಿಷ್ಯವಾಣಿ ಎಷ್ಟು ಶಕ್ತಿಯುತವಾಗಿ ವೈಭವಪೂರ್ಣವಾಗಿ ಮತ್ತು ಎಷ್ಟು ಸ್ಪಷ್ಟತೆಯಿಂದ ವಿವರಿಸಲಾಗಿತ್ತು. ಅವರು ತಿಳಿಸಿದ್ದ ಹಾಗೆ ಒಂದೆಡೆ ಭಯ ಮತ್ತು ಭಯಕ್ಕೆ ಕಾರಣಗಳು, ಇನ್ನೊಂದೆಡೆ ಸ್ವಯಂ ಹೇಳುತ್ತಿದ್ದರು. ನಾನು ಭವಿಷ್ಯವಾಣಿಯ ದಿನಗಳಲ್ಲಿ ಭಯಪಡುತ್ತಿದ್ದೆ. ಹಾಗೆ ಇನ್ನು ಅವರು ನಮ್ಮ ಬೇಡಿಕೆಗೆ ಸ್ಪಂದಿಸಿ ನಮ್ಮ ಮುಂದೆ ಆಣೆ ಮಾಡಿ ತೃಪ್ತಿಪಡಿಸಲಾರದೇ ನನ್ನ ಮುಂದೆ ಇರುವಂತಹ ಭಯ ಭವಿಷ್ಯವಾಣಿಗೆ ಸಂಬಂಧಿಸಿದ್ದಾಗಿರಲಿಲ್ಲ. ಬದಲು ಖಡ್ಗಗಳ ಭಯವಾಗಿತ್ತೇ ಹೊರತು ಬೇರೇನೂ ಇರಲಿಲ್ಲ, ಅಂತೂ ಈ ವಾದದ ಭಾರ ಅವರ ಮೇಲಿದೆ.

ಜೀವ ಭಯದ ಕಾರಣ ಅವರು ಎಷ್ಟೋ ಸಲ ಖುದ್ದು ಹೇಳಿಕೊಂಡಿದ್ದಾರೆ ಇಸ್ಲಾಮಿ ಗೌರವದಿಂದ ಮತ್ತು ಭವಿಷ್ಯವಾಣಿಯ ಪ್ರಭಾವದಿಂದಾಗಿ ಆಗಿರಲಿಲ್ಲ. ಬದಲಾಗಿ ಬೇರೆ ಕಾರಣದಿಂದಾಗಿತ್ತು. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–9, ಪುಟ–01)

**ಒಬ್ಬ ಕ್ರೈಸ್ತನ ಆಕ್ಷೇಪ: ಬಹುಮಾನದ ಭರವಸೆ ಕೇವಲ ಮಾತುಗಾರಿಕೆಯಾಗಿದೆ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಕ್ರೈಸ್ತ ಬಂಧು ಒಬ್ಬರು ಬರೆಯುತ್ತಾರೆ. ರೂಪಾಯಿಗಳ ನೀಡಿಕೆ ಕೇವಲ ಮಾತುಗಾರಿಕೆಯಾದರೆ ಆಥಮ್ ಸಾಹಿಬ್ ಆಣೆ ಮಾಡಲಿ, ಅವರಿಗೆ ಈ ಭಯ ಕಾಡುತ್ತಿದೆ. ರೂಪಾಯಿಗಳು ದೊರೆಯಲಾರವು. ಹಾಗಾದರೆ ನೆನಪಿರಲಿ. ಇದು ಕೇವಲ ನಿರರ್ಥಕ, ವಂಚಕರ ಭರವಸೆ ಅಲ್ಲ. ನಾವು ಪ್ರಮಾಣ ಮಾಡುತ್ತೇವೆ. ನಾವು ಅವರು ಆಣೆ ಮಾಡುವ ಮುಂಚಿತವಾಗಿ ಕ್ರಮಬದ್ಧ ರೀತಿಯಲ್ಲಿ ಬಾಂಡ್ ಮೂಲಕ ರೂಪಾಯಿಗಳನ್ನು ಆಥಮ ಸಾಹಿಬರ ಸಾಕ್ಷಿಗಳಿಗೆ ಒಪ್ಪಿಸುವೆವು. ಆಥಮ್ ಸಾಹಿಬರ ಇಬ್ಬರು ಅಳಿಯಂದಿರು ಸಾಕ್ಷಿಯಾದರೂ ನಾವು ಅದಕ್ಕೂ ಒಪ್ಪುವೆವು ಅವರಂತೂ ಗೌರವಾರ್ಹ ಹುದ್ದೆಯಲ್ಲಿರುವವರು ಬಾಂಡ್ ತಯಾರಾದ ಮೇಲೆ ಏಕಪಕ್ಷೀಯವಾಗಿ ರೂಪಾಯಿಗಳನ್ನು ಕೊಡಲು ತಡ ಮಾಡಿದರೆ ನಿಸ್ಸಂಶಯವಾಗಿ ನಾವು ಸುಳ್ಳುಗಾರರಾಗುವೆವು. ಆಗ ಜಾಮೀನುದಾರರಿಗೆ ಹಕ್ಕಿರುವುದು. ನಮ್ಮಿಂದ ಬಾಂಡ್ ಪ್ರಕಾರ ರೂಪಾಯಿಗಳು ಪಡೆಯುವವರಿಗೆ ಆಥಮ ಸಾಹಿಬರ ಬಾಗಿಲು ಹತ್ತಲು ಬಿಡಬಾರದು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಈನ್–9, ಪುಟ–112)

**ಆಥಮ್ ಸಾಹಿಬರ ಈ ವಾದ ಸರಿಯೇ. ನಾನು ವೃದ್ಧ ವಯಸ್ಸಿಗೆ ಬಂದ ಕಾರಣ ಯಾವ ಸಮಯ ದಲ್ಲಾದರೂ ಸಾಯಬಹುದು?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಅವರು ಸ್ವಯಂ ತಮ್ಮ ದೃಷ್ಟಿಯಲ್ಲಿ ನನ್ನನ್ನು ಸುಳ್ಳುಗಾರ ಮತ್ತು ನನ್ನ ದಿವ್ಯವಾಣಿಯನ್ನು ಸುಳ್ಳೆಂದು ಹಾಗೂ ಮಸೀಹನ ಪುಷ್ಟಿ ತಮಗಿದೆ ಎಂದುಕೊಂಡು ಏಕೆ ಮರಣದಿಂದ ಭಯಪಡುತ್ತಿದ್ದಾರೆ ಮತ್ತು ಪದೇ ಪದೇ ಹೇಳುತ್ತಿದ್ದಾರೆ. ನನ್ನ ವಯಸ್ಸು 64 ಅಥವಾ 68 ಆಗಿದೆ ಎಂದು. ಓ ಸಾಹೇಬರೇ. ನಾವು ಕೇಳುವುದು ಜೀವಂತವಾಗಿಡುವ ಶಕ್ತಿ ದೇವನಿಗಿಲ್ಲವೆ? ಇದೆಂತಹ ವಿಶ್ವಾಸದ ಮಾತು. ತಮ್ಮದು ಸತ್ಯವೆಂದು ತಿಳಿದು ಸಹ ದೇವನ ಮೇಲೆ ಭರವಸೆ ಹೊಂದುತ್ತಿಲ್ಲ. ನೋಡಿ ನನ್ನ ವಯಸ್ಸು ಸಹ 60ರ ಸಮೀಪವಿದೆ. ನಾವು ಮತ್ತು ಆಥಮ್ ಸಾಹಿಬ್ ಒಂದೇ ದೇವನ ವಿಧಿನಿಯಮಕ್ಕೆ ಒಳಪಟ್ಟಿದ್ದೇವೆ. ಆದರೆ ನಾನು ಬಲ್ಲೆನು. ಅಲ್ಲಾಹನು ಪರೀಕ್ಷೆಯ ಸಮಯದಲ್ಲಿ ಅವಶ್ಯವಾಗಿ ನನ್ನನ್ನು ಜೀವಂತವಾಗಿರಿಸುವನು. ಏಕೆಂದರೆ ನಮ್ಮ ಪ್ರಭೂ ಸರ್ವಶಕ್ತನೂ ಜೀವಂತನೂ ಮತ್ತು ನೆಲೆನಿಲ್ಲುವವನಾಗಿದ್ದಾನೆ. ಮರಿಯಮನ ಪುತ್ರನ ಹಾಗೆ ದುರ್ಬಲನಲ್ಲ. ಈ ಪತ್ರಿಕೆಯ ಪ್ರಕಟಣೆಯ ನಂತರ ನಾವು ಒಂದು ವಾರತನಕ ಕಾಯುವೆವು (ಅದೇ ಪುಟ 13).

**ಮಾರ್ಟಿನ್ ಕ್ಲಾರ್ಕ್ ಆಥಮರಿಗೆ ಮನವರಿಕೆ ಮಾಡಲು ಭಗೀರಥ ಪ್ರಯತ್ನ ನಡೆಸಿದರು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಕೆಲ ಪತ್ರಿಕೆಗಳು ತುಂಬಾ ಹುರಿದುಂಬಿಸಿದವು. ಆದರೆ ಅವರು ಯಾರ ಮಾತಿಗೂ ಕಿವಿಗೊಡಲಿಲ್ಲ. ಡಾ॥ ಮಾರ್ಟಿನ್ ಕ್ಲಾರ್ಕ್ ಮನವರಿಕೆ ಮಾಡಿ ಮಾಡಿ ಸೋತು ಹೋದ. ಆದರೆ ಅವರು ಅವನ ಮಾತಿಗೂ ಎರಡು ಕೈಗಳನ್ನು ಕಿವಿಗಳ ಮೇಲೆ ಇಟ್ಟುಕೊಂಡರು. ಅದಾಗ್ಯೂ ವಿವೇಕ, ನ್ಯಾಯ, ಮತ್ತು ಕಾನೂನಿನ ನಿಮಿತ್ತ ಅವರ ಭಯಕ್ಕೆ ಏನು ಕಾರಣವಿತ್ತು. ಸ್ಪಷ್ಟೀಕರಿಸಿ ಸಾಬೀತುಪಡಿಸಿ ಮುಕ್ತವಾಗಬಹುದಿತ್ತು.

**ಆಥಮನು ಆಣೆ ಮಾಡಲು ಬರಲಾರನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನೆನಪಿಡಿರಿ. ಅವರು ಈ ಪತ್ರಿಕೆಯ ಕಡೆ ಬರಲಾರರು. ಏಕೆಂದರೆ ಅವರು ಸುಳ್ಳುಗಾರರಾಗಿದ್ದಾರೆ. ನಮ್ಮ ಮನವನ್ನು ಚೆನ್ನಾಗಿ ತಿಳಿದುಕೊಂಡಿರುವರು. ಅವರು ಈ ಭಯದಿಂದ ಮರಣದ ಸಮೀಪ ತಲುಪಿದ್ದರು. ನಾವು ಒತ್ತು ನೀಡಿ ಹೇಳುವೆವು. ಶ್ರೀ ಆಥಮರು ಈ ವಾದ ಎದುರಿಸಲು ಬರಲಾರರು. ಏಕೆಂದರೆ ಅವರು ತಮ್ಮ ಮನಸ್ಥಿತಿ ಅರಿಯುವವರೇನೂ ಅಲ್ಲ. ಅವರ ಮನಸ್ಸು ಸಾಕ್ಷಿ ನೀಡುವುದು ನಮ್ಮ ದಿವ್ಯವಾಣಿ ಸತ್ಯವಾಗಿದೆ. ಅವರು ಈ ಮಾತು ಜಾಹೀರುಪಡಿಸದಿರುವುದು ಬೇರೆಯಾಗಿದೆ. ಆದರೆ ಅವರ ಮನಸಾಕ್ಷಿ ಈ ವಾದವನ್ನು ಪುಷ್ಟೀಕರಿಸುತ್ತದೆ. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ–9, ಪುಟ–10, 11)

ಓದುಗರೆ, ನೀವು ಅವರು ಆಣೆ ಮಾಡಲು ಮೈದಾನಕ್ಕೆ ಬರುವವರು ಎಂದು ಭಾವಿಸಿರುವಿರೋ? ಖಂಡಿತ ಬರಲಾರರು. ಸುಳ್ಳುಗಾರರು ಎಂದಾದರು ಇಂತಹ ಸಾಹಸ ತೋರಬಲ್ಲರೆ? ಅದು ವಿಶ್ವಾಸದ ಶಕ್ತಿ ಆಧರಿಸಿರುತ್ತದೆ. ಅವರಿಗಂತೂ ಹೆದರಿ ಹೆದರಿ ಪಾಯಿಖಾನೆ ಬರುತ್ತಿದ್ದವು. ಮೂರ್ಛೆ ತಪ್ಪಿ ಹೋಗುತ್ತಿದ್ದರು. ಆದುದರಿಂದ ಶಿಕ್ಷೆ ಕೊಡಲು ರಿಯಾಯಿತಿ ತೋರುವ ಅಲ್ಲಾಹನು ಕರುಣಾನಿಧಿಯಾದವನು ತನ್ನ ದಿವ್ಯವಾಣಿಯ ಶರತ್ತಿನ ಪ್ರಕಾರ ಅವರೊಡನೆ ವ್ಯವಹರಿಸಿದನು. ಇದೀಗ ಪಂಜರದಿಂದ ಹೊರಟ ಹಕ್ಕಿ ಮತ್ತೇಕೆ ಆ ಪಂಜರದೊಳಗೆ ಹೋಗಬಯಸುತ್ತದೆ. ಪ್ರೀತಿಯ ಓದುಗರೇ! ನೀವು ನಮ್ಮ ಬರಹಗಳನ್ನು ಗಂಭೀರವಾಗಿ ನೋಡುವುದಿಲ್ಲವೇ. ಅದರೊಳಗಿರುವ ಸತ್ಯ ನಮಗೆ ತಿಳಿಯುವುದಿಲ್ಲವೆ? ನಿಮ್ಮ ಭಕ್ತಿ ಪ್ರಕಾಶ ಸಾಕ್ಷ್ಯ ನೀಡುವುದಿಲ್ಲವೇ? ಅಂತಹ ವಿಶ್ವಾಸದ ಶಕ್ತಿ, ಸಾಹಸ ಮತ್ತು ದೃಢತೆ ಮಿಥ್ಯವಾದಿಯಿಂದ ಎಂದೂ ಪ್ರಕಟವಾಗಲು ಸಾಧ್ಯವಿಲ್ಲ. ನನಗೆ ನಿಶ್ಚಿತವಾದ ಜ್ಞಾನ ದೊರೆಯದೆ ಹೋಗುತ್ತಿದ್ದಲ್ಲಿ ಹೀಗೆ ಮೂರು ಸಾವಿರ ರೂಪಾಯಿ ಖರ್ಚು ಮಾಡಲು ನಾನೇನು ಹುಚ್ಚನೆ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–9, ಪುಟ–77)

**30 ಡಿಸೆಂಬರ್ 1895ರ ಪತ್ರಿಕೆಯಲ್ಲಿ ನೀಡಿದ ಸ್ವಾಭಿಮಾನದ ಮಾತುಗಳು ಆಥಮನಿಗೆ ಆಣೆ ಮಾಡಲು ಉತ್ತೇಜಿಸಲಾಗಿತ್ತು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಆಥಮ್ ಸಾಹಿಬರಿಗೆ ಆಣೆ ಮಾಡಲು ಕಳುಹಿಸಿದ ಅಂತಿಮ ಸಂದೇಶ 30 ಡಿಸೆಂಬರ್ 1895ರ ಪತ್ರಿಕೆಯಾಗಿತ್ತು. ಅದರಲ್ಲಿ ಸ್ವಾಭಿಮಾನವನ್ನು ಕೆರಳಿಸುವ ಪದಗಳಿದ್ದವು. ಆಥಮರನ್ನು ಕ್ರೈಸ್ತ ಜನರು ಚೂರು ಚೂರು ಮಾಡಿದರು. ಕುತ್ತಿಗೆ ಕೊಯ್ದರೂ ಅವರು ಆಣೆ ಮಾಡಲಾರರು. ಅಂದ ಹಾಗೆ ಆಥಮನು ಸತ್ಯವಾಗಿ ಆಣೆ ಮಾಡುವುದರಿಂದ ಹಿಂಜರಿದರು. ಸತ್ಯವನ್ನು ಬಯಲಿಗೆ ತರಲು ಇಷ್ಟಪಡಲಿಲ್ಲ. ಆದುದರಿಂದ ಅವನು ಸತ್ಯವನ್ನು ಅಡಗಿಸಿಟ್ಟುಕೊಂಡಂತೆಯೇ ಅಲ್ಲಾಹನು ತನ್ನ ವಾಗ್ದಾನದಂತೆ ಅವನ ಸ್ಥಿತಿ ಅವನ ಸಹಧರ್ಮೀಯರ ದೃಷ್ಟಿಯಿಂದ ಗೌಪ್ಯವಾಗಿಟ್ಟನು. (ಅಂಜಾಮ್ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–3)

**ಆಥಮನು ಮರಣ ಹೊಂದದಿರುವಾಗ ಜನರು ಹೇಳಿದರು. ಏಕೆ ಮರಣ ಹೊಂದಿಲ್ಲ? ಲೇಖರಾಮನು ಮರಣ ಹೊಂದಿದಾಗ ಜನರು ಹೇಳಿದರು. ಏಕೆ ಮರಣ ಹೊಂದಿದನು?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಆಥಮನು ಮೃದುವಾದನು. ಪಶ್ಚಾತ್ತಾಪಪಟ್ಟನು ಮತ್ತು ಅವರ ಹೃದಯ ಭಯಗೊಂಡಿತು. ಆದುದರಿಂದ ಅಲ್ಲಾಹನು ದಿವ್ಯವಾಣಿಯಲ್ಲಿರುವ ಶರತ್ತಿನ ಪ್ರಕಾರ ಭಯದ ದಿನಗಳಲ್ಲಿ ರಿಯಾಯಿತಿ ನೀಡಿದನು. ಆದರೂ ಲೋಕದ ಜನರು ಮತ್ತೆ ಅದೇ ಹೇಳಿದರು. "ಆಥಮನು ಏಕೆ ಮರಣ ಹೊಂದಿಲ್ಲ."

ಲೇಖರಾಮನು ಏನೂ ಭಯಪಡಲಿಲ್ಲ ಮತ್ತು ಮತ್ಸರ ತೋರಿಸಿದನು. ಆದುದರಿಂದ ಅಲ್ಲಾಹನು ಸರಿಯಾದ ಅವಧಿಯ ಒಳಗೆ ಮರಣ ನೀಡಿದನು. ಆಗ ಲೋಕದ ಜನರು ಹೇಳಿದರು. ಲೇಖರಾನು ಏಕೆ ಮರಣ ಹೊಂದಿದನು. ಅವಶ್ಯವಾಗಿ ಏನಾದರೂ ಸಂಚಿರಬಹುದು. ಅಂದ ಹಾಗೆ ಅವಧಿಯೊಳಗೆ ಮರಣದಿಂದ ಸಂರಕ್ಷಿಸಲ್ಪಟ್ಟವನ ಬಗ್ಗೆಯೂ ಹುಯಿಲೆಬ್ಬಿಸಲಾಯಿತು ಏಕೆ ರಕ್ಷಿಸಲ್ಪಟ್ಟನು ಎಂದು. ಮತ್ತು ಅವಧಿಯೊಳಗೆ ಶಿಕ್ಷಿಸಲ್ಪಟ್ಟವನ ಬಗ್ಗೆಯೂ ಹುಲ್ಲೆಬ್ಬಿಸಲಾಯಿತು. ಏಕೆ ಶಿಕ್ಷಿಸಲ್ಪಟ್ಟವನು ಎಂದು. (ನಿಶಾನೆ ಆಸ್ಮಾನಿ, ರೂಹಾನಿ ಖಝಾಈನ್, ಸಂಪುಟ–12, ಪುಟ–52)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಶತಪ್ರಯತ್ನಪಟ್ಟರೂ ಅವರು ಆಣೆ ಮಾಡಲಿಲ್ಲ. ನಾಲ್ಕು ಸಾವಿರ ರೂಪಾಯಿಗಳು ಭಾರಿ ಬಹುಮಾನ ಸಹ ನಿಗದಿ ಮಾಡಲಾಯಿತು. ಆದರೂ ಆಣೆ ಮಾಡಲು ಸಿದ್ಧನಾಗಿಲ್ಲ. ಈ ಅಪಮಾನದಿಂದ ಪಾರಾಗಲು ಈ ಸುಳ್ಳು ನೆಪವನ್ನು ಮುಂದಿಟ್ಟನು. ನಮ್ಮ ಧರ್ಮದಲ್ಲಿ ಆಣೆ ಮಾಡುವುದು ನಿಷಿದ್ಧವಿದೆ. ಮಾರ್ಟಿನ್ ಕ್ಲಾರ್ಕ್ ಬರೆದನು. ಕ್ರೈಸ್ತ ಮತದಲ್ಲಿ ಆಣೆ ಮಾಡುವುದು ಮುಸಲ್ಮಾನರಲ್ಲಿ ಹಂದಿ ತಿನ್ನುವುದು ನಿಷಿದ್ಧವಾದಂತೆಯೇ ನಿಷಿದ್ಧವಿದೆ. ಹಜ್‌ರತ್ ಮಸೀಹ್ ಮೌಊದ್(ಅ) ಅದಕ್ಕೇನು ಉತ್ತರ ನೀಡಿದ್ದಾರೆ. ಅದು ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಸ್ತುತಪಡಿಸುವೆವು.

(ಮನ್ಸೂರ್ ಅಹ್ಮದ್ ಮಸ್ರೂರ್)

**ಪವಿತ್ರ ಖುರ್‌ಆನ್**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:
ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. ***(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ–16, ಪುಟ–103)***

**ಹುಝೂರ್ ಅನ್ವರ್(ಅತಬಿ)ರವರು www.ahmadipedia.org ವನ್ನು ಉದ್ಘಾಟಿಸಿದರು.**

**ಇದರಲ್ಲಿ ಜಮಾಅತ್ತಿನ ಪುಸ್ತಕಗಳು, ವ್ಯಕ್ತಿತ್ವಗಳು, ಘಟನೆಗಳು, ನಂಬಿಕೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ಮೂಲಭೂತ ಮಾಹಿತಿಯನ್ನು ಒದಗಿಸುತ್ತದೆ.**

**ಯಾವುದೇ ವಿಳಯದ ಬಗ್ಗೆ ನಮ್ಮ ಮಾಹಿತಿ ಅಥವಾ ಪುರಾವೆಗಳನ್ನು ಸಹ ನಮಗೆ ಒದಗಿಸಲು ಸಾಧ್ಯವಾಗುತ್ತದೆ**

**ಅಲ್‌ಹಮ್‌ದುಲಿಲ್ಲಾಹ್!** ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿ)ರವರು 2 ಜುಲೈ 2021 ಶುಕ್ರವಾರದ ದಿವಸ ಜುಮ್‌ಅ ನಮಾಝ್‌ನ ನಂತರ ಒಂದು ಹೊಸ ವೆಬ್‌ಸೈಟ್ www.ahmadipedia.org ಅನ್ನು ಉದ್ಘಾಟಿಸಿದರು. ಅದನ್ನು ಉದ್ಘಾಟಿಸುತ್ತ ಅದರ ವಿವರವನ್ನು ಹುಝೂರ್ ಅನ್ವರ್(ಅತಬಿ) ರವರು ತಮ್ಮ ಖುತ್‌ಬ ಜುಮ್‌ಅದಲ್ಲಿ ಹೇಳಿದರು:
"ಇಂದು ಪ್ರಾರಂಭವಾಗಲಿರುವ ಅಹ್ಮದಿಯಾ ಎನ್‌ಸೈಕ್ಲೋಪೀಡಿಯಾವನ್ನು ಕೇಂದ್ರ ದಾಖಲೆಗಳು ಮತ್ತು ಸಂಶೋಧನಾ ಕೇಂದ್ರವು ರಚಿಸಿದೆ ಎಂದು ನಾನು ಘೋಷಿಸಲು ಬಯಸುತ್ತೇನೆ. ಈ ವೆಬ್‌ಸೈಟ್ ಅನ್ನು ಜಮಾಅತ್ತಿನ ಸದಸ್ಯರಿಗಾಗಿ ನ್‌ಲೈನ್‌ನಲ್ಲಿ ಒದಗಿಸಲಾಗುತ್ತಿದೆ. ಇದನ್ನು www.ahmadipedia.org ನಲ್ಲಿ ಪ್ರವೇಶಿಸಬಹುದು, ಅಲ್ಲಿ ವಿಳಯವನ್ನು ಹುಡುಕಲು ಸರ್ಚ್ ಎಂಜಿನ್ ಶೈಲಿಯ ಮುಖಪುಟ ತೆರೆಯುತ್ತದೆ. ಇದು ತುಂಬಾ ಸರಳ ಮತ್ತು ಬಳಸಲು ಸುಲಭವಾಗಿದೆ. ಜಮಾಅತ್ತಿನ ಪುಸ್ತಕಗಳು, ವ್ಯಕ್ತಿತ್ವಗಳು, ಘಟನೆಗಳು, ನಂಬಿಕೆಗಳು ಇತ್ಯಾದಿಗಳ ಬಗ್ಗೆ ಮೂಲಭೂತ ಮಾಹಿತಿಯನ್ನು ಒದಗಿಸಲಾಗಿದೆ. ಪ್ರತಿ ಪ್ರವೇಶದೊಂದಿಗೆ, ಸಂಬಂಧಿತ ವೆಬ್‌ಸೈಟ್‌ಗಳಿಗೆ ಲಿಂಕ್‌ಗಳನ್ನು ಒದಗಿಸಲಾಗುತ್ತದೆ, ಪಕ್ಷದ ಪತ್ರಿಕೆಗಳಿಂದ ವೀಡಿಯೊಗಳು ಮತ್ತು ಲೇಖನಗಳಿಗೆ ಈ ಮೂಲಗಳಿಂದ ವಿವರವಾದ ಮಾಹಿತಿಯನ್ನು ಪಡೆಯಬಹುದು. ವಿವರಗಳಿಗಾಗಿ ಒದಗಿಸಲಾದ ಈ ಲಿಂಕ್‌ಗಳ ಒಂದು ಪ್ರಯೋಜನವೆಂದರೆ ಬಳಕೆದಾರರು ಜಮಾಅತ್ ಅಹ್ಮದಿಯಾ ಅವರ ಇತರ ವೆಬ್‌ಸೈಟ್‌ಗಳಿಗೆ ಪ್ರವೇಶವನ್ನು ಹೊಂದಿರುತ್ತಾರೆ ಮತ್ತು ಎಲ್ಲಾ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಬಳಸಲು ಸಾಧ್ಯವಾಗುತ್ತದೆ. ಪ್ರಪಂಚದಾದ್ಯಂತದ ಸ್ನೇಹಿತರು ಸಾಕಷ್ಟು ಉಪಯುಕ್ತ ಮಾಹಿತಿಯನ್ನು ಹೊಂದಿದ್ದಾರೆ, ಅದನ್ನು ಎಲ್ಲಿಯೂ ದಾಖಲಿಸಲಾಗುವುದಿಲ್ಲ. ಅಹ್ಮದಿ ಪೀಡಿಯಾ ಅವರ ವೆಬ್‌ಸೈಟ್‌ನಲ್ಲಿ ಕೊಡುಗೆ (contribute) ಎಂಬ ಆಯ್ಕೆಯೂ ಇದೆ, ಅಲ್ಲಿ ಅವರು ಯಾವುದೇ ವಿಳಯದ ಬಗ್ಗೆ ತಮ್ಮ ಮಾಹಿತಿ ಅಥವಾ ಪುರಾವೆಗಳನ್ನು ಅಥವಾ ದಾಖಲೆಗಳನ್ನು ಒದಗಿಸಬಹುದು. ಅದನ್ನು ನೇರವಾಗಿ ಸ್ವತಃ ಹಾಕುವುದಲ್ಲ ಬದಲಿಗೆ ಅದನ್ನು ವ್ಯವಸ್ಥಾಪಕರಿಗೆ ಒದಗಿಸುವುದು. ಒದಗಿಸಿದ ವಸ್ತುಗಳ ಕುರಿತು ಸಂಶೋಧನೆ ಮತ್ತು ಪರಿಶೀಲನೆಯನ್ನು ಒದಗಿಸಿದ ನಂತರ, ಅದನ್ನು ಸಂಬಂಧಿತ ವಿಳಯ ನಮೂದಿನಲ್ಲಿ ಸೇರಿಸಲಾಗುವುದು. ಈ ರೀತಿಯಾಗಿ, ಈ ವೆಬ್‌ಸೈಟ್ ಎಲ್ಲಾ ಸದಸ್ಯರ ಸಹಕಾರದೊಂದಿಗೆ ನಡೆಯುತ್ತಿರುವ ಯೋಜನೆಯಾಗಿ ಪರಿಣಮಿಸುತ್ತದೆ ಮತ್ತು ಇನ್‌ಶಾಅಲ್ಲಾಹ್ ಪ್ರತಿ ಅಹ್ಮದಿಗೂ ಪ್ರಯೋಜನಕಾರಿಯಾಗಲಿದೆ. ವೆಬ್‌ಸೈಟ್‌ನಲ್ಲಿ ಯಾರಾದರೂ ಅಗತ್ಯವಾದ ವಿಳಯವನ್ನು ಪಡೆಯದಿದ್ದರೆ, ಅವರು ಅಹ್ಮದಿ ಪೀಡಿಯಾ ಅವರನ್ನು ಸಂಪರ್ಕಿಸಲು ಸಾಧ್ಯವಾಗುತ್ತದೆ ಮತ್ತು ನಂತರ ಈ ಜನರು ವೆಬ್‌ಸೈಟ್‌ನಲ್ಲಿ ಅಗತ್ಯವಾದ ವಿಳಯವನ್ನು ಒದಗಿಸಲು ವ್ಯವಸ್ಥೆ ಮಾಡುತ್ತಾರೆ. ಈ ಎಲ್ಲಾ ಮಾಹಿತಿಯನ್ನು ವಿಶ್ವಾಸಾರ್ಹ ಮೂಲಗಳಿಂದ ಒದಗಿಸಲಾಗಿದ್ದರೂ, ಬಳಕೆದಾರರು ಯಾವುದೇ ಮಾಹಿತಿಗೆ ವಿರುದ್ಧವಾದ ಪುರಾವೆಗಳನ್ನು ಹೊಂದಿದ್ದರೆ, ದಯವಿಟ್ಟು ಅಂತಹ ಪುರಾವೆಗಳನ್ನು ನಮಗೆ ಒದಗಿಸಿ ಇದರಿಂದ ಜಮಾಅತ್ತಿನ ಇತಿಹಾಸವನ್ನು ಪರಿಶೀಲಿಸಲು ನಂತರದ ಸಂಶೋಧನೆಗಳನ್ನು ಮಾಡಬಹುದು. ಈ ವ್ಯಬ್‌ಸೈಟನ್ನು ತಯಾರಿಸಲು ಎಲ್ಲಾ ತಾಂತ್ರಿಕ ಕ್ರಮಗಳನ್ನು ಕೇಂದ್ರ ಐಟಿ ಇಲಾಖೆಯು ಮಾಡಿದೆ ಮತ್ತು ಇದಕ್ಕಾಗಿ ಐಟಿ ಇಲಾಖೆಯು ಶ್ರಮಿಸಿದೆ, ಇದರಲ್ಲಿ ಅದರ ಖಾಯಂ ಸಿಬ್ಬಂದಿ ಮತ್ತು ಸ್ವಯಂಸೇವಕರು ಸೇರಿದ್ದಾರೆ. ಕೇಂದ್ರ ಆರ್ಕೈವ್ಸ್ ವಿಭಾಗದ ಬೋಧಕರು ಮತ್ತು ಸ್ವಯಂಸೇವಕರು ವಸ್ತುಗಳನ್ನು ತಯಾರಿಸಲು ಶ್ರಮಿಸಿದ್ದಾರೆ ಮತ್ತು ಅನುವಾದಿಸಿದ ವಸ್ತುಗಳನ್ನು ಉರ್ದುವಿನಿಂದ ಅಪ್‌ಲೋಡ್ ಮಾಡಲು ನಿಸ್ವಾರ್ಥರಾಗಿ ಶ್ರಮಿಸಿದ್ದಾರೆ. ಅವರೆಲ್ಲರೂ ಈ ವೆಬ್‌ಸೈಟ್‌ಗಾಗಿ ಶ್ರಮಿಸುತ್ತಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ ಮತ್ತು ಶುಕ್ರವಾರದ ನಮಾಝ್‌ನ ನಂತರ ನಾನು ಇಂದು ಅದನ್ನು ಪ್ರಾರಂಭಿಸುತ್ತೇನೆ, ಇನ್‌ಶಾಅಲ್ಲಾಹ್"

ಜುಮ್‌ಅ ನಮಾಝ್‌ನ ನಂತರ, ಹುಝೂರ್ ಅನ್ವರ್(ಅತಬಿ)ರವರು ಅದನ್ನು ಉದ್ಘಾಟಿಸಿ ದುಆ ಮಾಡಿಸಿದರು. ಪ್ರಪಂಚದಾದ್ಯಂತದ ಅಹ್ಮದಿಗಳು ಎಂಟಿಎ ಮೂಲಕ ಈ ಲೈವ್ ದುಆದಲ್ಲಿ ಸೇರಿಕೊಂಡರು. ಜಮಾಅತ್ತಿಗಾಗಿ ಈ ಹೊಸ ವೆಬ್‌ಸೈಟ್ ಅನ್ನು ಪ್ರಾರಂಭಿಸಲು ಅಲ್ಲಾಹನು ಅನುಗ್ರಹಿಸಲಿ. ಆಮೀನ್ **(ಪತ್ರಿಕಾಂಗ)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

**ದಾರುಸ್ಸನಾಅತ್ ಖಾದಿಯಾನ್**

**Ahmadiyya Vocational (Technical) Training center, Qadian. ನಲ್ಲಿ ದಾಖಲಾತಿ ಪ್ರಾರಂಭಗೊಂಡಿದೆ. ಕರಕೌಶಲ್ಯತೆ ಪಡೆಯ ಬಯಸುವ ಯುವಕರು ತ್ವರೆ ಮಾಡಿರಿ.**

ಎಲ್ಲಾ ಅಹ್ಮದಿ ಯುವಕರ ಅವಗಾಹನೆಗಾಗಿ ಸೂಚಿಸಲಾಗುತ್ತದೆ. "ದಾರುಸ್ಸನಾಅತ್ ಖಾದಿಯಾನ್" ಸಂಸ್ಥೆಯಲ್ಲಿ ದಾಖಲಾತಿ ಪ್ರಾರಂಭಗೊಂಡಿವೆ. ಈ ಸಂಸ್ಥೆಯಲ್ಲಿ, ಇಲೆಕ್ಟ್ರೀಶಿಯನ್/ಫ್ಲಮ್‌ಬಿಂಗ್/ವೆಲ್ಡಿಂಗ್/ಡಿಸೆಲ್ ಮೆಕಾನಿಕ್/motor vehicle mechanic/AC and Refrigerator ಮತ್ತು ಕಂಪ್ಯೂಟರಿನ ಒಂದು ವರ್ಷದ ಕೋರ್ಸ್ ಮಾಡಿಸಲಾಗುತ್ತದೆ. ಸರಕಾರಿ ಸಂಸ್ಥೆಯಿಂದ NSIC ಯ ಸನದುಗಳನ್ನು (Certified) ನೀಡಲಾಗುತ್ತದೆ. ಕೌಶಲ್ಯತೆ ಕಲಿಯ ಬಯಸುವ ಯುವಕರಿಗೆ ಅತ್ಯುತ್ತಮ ಅವಕಾಶವಾಗಿರುತ್ತದೆ. ಯಾವ ಯುವಕರು ತಮ್ಮ ಶಾಲೆಯ ಶಿಕ್ಷಣ ಪೂರ್ಣ ಮಾಡಲಾಗಲಿಲ್ಲವೋ ಅವರು ಈ ಕೋರ್ಸ್‌ಗಳಲ್ಲಿ ದಾಖಲಾತಿ ಪಡೆದು ಲಾಭಾನ್ವಿತರಾಗಬಹುದು. ಖಾದಿಯಾನಿನಿಂದ ಹೊರಗಿನ ಅಹ್ಮದಿ ಯುವಕರಿಗೆ ಜಮಾಅತಿನ ಆಶ್ರಯದಲ್ಲಿ ನಡೆಯುವ ಹಾಸ್ಟೆಲ್‌ನಲ್ಲಿ ಊಟದ ವ್ಯವಸ್ಥೆ ಇರುತ್ತದೆ. ಹಾಸ್ಟೆಲ್ ಮತ್ತು ಊಟದ ಖರ್ಚು ಉಚಿತವಾಗಿರುತ್ತದೆ. ಯಾವ ಶುಲ್ಕವು ಪಡೆಯಲಾಗುವುದಿಲ್ಲ. ದಾಖಲಾತಿ ಪಡೆಯ ಬಯಸುವ ಯುವಕರು ಅತಿ ಶೀಘ್ರವಾಗಿ ಈ ಕೆಳಗಿನ ನಂಬರುಗಳಿಗೆ ಸಂಪರ್ಕಿಸಿರಿ.

**ಫೋನ್ ನಂ: 9872923363, 9872725895, 8077546198**

**email : darulsanaat.qadian@gmail.com**

**(ಪ್ರಾಂಶುಪಾಲರು ದಾರುಸ್ಸನಾಅತ್ ಖಾದಿಯಾನ್)**

## ಆಧ್ಯಾತ್ಮಿಕ ಹಾಗೂ ಯೋಜನೆ ನೆಲೆಯಲ್ಲಿ ಎಂ.ಟಿ.ಎ ಕಾಲಾವಧಿಯ ಖಲೀಫರ ಸಂದೇಶ ಲೋಕಕ್ಕೆ ತಲುಪಿಸುವುದರಲ್ಲಿ ಅತ್ಯಂತ ಪ್ರಭಾವಪೂರ್ಣ ಪಾತ್ರ ವಹಿಸುತ್ತಿದೆ. ಕಳೆದ 18 ತಿಂಗಳುಗಳಿಂದ ಲೋಕವು ಕಷ್ಟಗಳಲ್ಲಿ ಸಿಲುಕಿದೆ. ನಾವು MTA ಮೂಲಕ ಅಲ್ಲಾಹನ ಅನುಗ್ರಹಗಳನ್ನು ಅವತರಿಸುತ್ತಿರುವುದನ್ನು ನೋಡಿದೆವು.

**(ಮೂರು ದಿವಸದ MTA international ಸಮ್ಮೇಳನ 2021, ನ್ನುದ್ದೇಶಿಸಿ ಹುಝೂರೆ ಅನ್ವರ್(ಅಬಿಅ) ಮಾಡಿದ ಅಭೂತಪೂರ್ವ ಭಾಷಣ)**

ಸಯ್ಯದ್‌ನಾ ಹಝ್ರ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ದಿನಾಂಕ: 27 ಜೂನ್ 2021 ರಂದು ಭಾರತದ ಸಮಯ ಸಂಜೆ 5 ಗಂಟೆಗೆ MTA International ನ ಸಮ್ಮೇಳನದ 2021 ಸಮಾರೋಪ ಸಮಾರಂಭನ್ನುದ್ದೇಶಿಸಿ ಮಾತನಾಡಿದರು. ಅದು ಲೋಕದಾದ್ಯಂತ ನೇರಪ್ರಸಾದ ಮೂಲಕ ಆಲಿಸಲಾಯಿತು. ಸಮ್ಮೇಳನದ ಪ್ರಾರಂಭ 25 ಜೂನ್ 2021 ಶುಕ್ರವಾರ ದಿವಸ ಬ್ರಿಟಾನಿಯಾದಲ್ಲಿ ಆಗಿತ್ತು. ಜೂನ್ 27 ರಂದು ಅದರ ಸಮಾರೋಪ ಸಮಾರಂಭವಿತ್ತು. ಅದರಲ್ಲಿ ಪವಿತ್ರ ಖುರ್‌ಆನ್‌ನ ಪಾರಾಯಣ ಮುಕರ್ರಮ್ ಬಾಸಿಲ್ ಬಟ್ ಸಾಹಿಬ್ ನೇರವೇರಿಸಿದರು. ಮುಕರ್ರಮ್ ಉಮರ್ ಶರೀಫ್ ಸಾಹಿಬ್ ಮಧುರ ಕಂಠದಿಂದ ಕವನ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಮುನೀರುದ್ದೀನ್ ಶಮ್ಸ್ ಸಾಹಿಬ್ Managing Director MTA International ಸಮ್ಮೇಳನದ ವರದಿ ವಚನ ಮಾಡುತ್ತಾ ಅವರು ಹೇಳಿದರು. MTA ಪ್ರಾರಂಭಗೊಂಡಾಗ ಸೌಲಭ್ಯಗಲು ತುಂಬಾ ಕಡಿಮೆ ಪ್ರಮಾಣದಲ್ಲಿದ್ದವು. ಆದರೆ ಅಲ್‌ಹಮ್ದುಲಿಲ್ಲಾಹ್ ಇಂದು ಲೋಕದ ವಿಭಿನ್ನ ದೇಶಗಳಲ್ಲಿ ಉತ್ತಮ ಮಟ್ಟದ ಸ್ಟೂಡಿಯೋಗಳು ಮತ್ತು ಆಧುನಿಕ ಯಂತ್ರಗಳಿಂದ ಸುಸಜ್ಜಿತ ಪ್ರಸಾರ ಕೇಂದ್ರಗಳಿವೆ. ಸಮ್ಮೇಳನದಲ್ಲಿ ಒಟ್ಟು 30 ದೇಶಗಳ MTA ತಂಡಗಳು ಆನ್‌ಲೈನ್ ಮೂಲಕ ಭಾಗವಹಿಸಿದ್ದವು.

ಅನಂತರ ಹುಝೂರ್ ಅನ್ವರ್(ಅಬಿಅ) ಭಾಷಣ ಮಾಡುತ್ತಾ ಹೇಳಿದರು. ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಗುರಿ ನಬಿ ಕರೀಂ(ಸ) ರವರ ಶಿಕ್ಷಣಗಳನ್ನು ಲೋಕದಾದ್ಯಂತ ಪ್ರಸಾರ ಮಾಡುವುದಾಗಿತ್ತು. ಅಲ್ಲಾಹನೇ ಆ ಗುರಿ ಪೂರ್ಣಗೊಳಿಸುವ ಸಾಧನೆಗಳು ದಯಪಾಲಿಸಿದ್ದಾನೆ. ಅವರು ಇಡೀ ಲೋಕದಲ್ಲಿ ಇಸ್ಲಾಮಿನ ಪ್ರಚಾರದ ಯೋಜನೆಗಳನ್ನು ಹಾಕಿಕೊಂಡಿದ್ದರು. ಅದು ಪತ್ರಿಕೆಗಳ, ನಿಯತಕಾಲಿಕಗಳ ಅಂದರೆ ಪ್ರಿಂಟ್ ಮಾಧ್ಯಮದ ಕಾಲವಾಗಿತ್ತು. ಅವರು ಇಸ್ಲಾಮಿನ ಸಂದೇಶ ಪ್ರಚಾರಗೊಳಿಸಲು ಈ ಮಾಧ್ಯಮಗಳನ್ನು ಸರಿಯಾಗಿ ಬಳಸಿಕೊಂಡರು. ಹುಝೂರರ ವಿಷಯಗಳು ಅತ್ಯಂತ ನಿಯಮಿತವಾಗಿ ಪತ್ರಿಕೆಗಳಲ್ಲಿ ಪ್ರಸಾರವಾಗುತ್ತಿದ್ದವು.

ಹುಝೂರ್(ಅತಬಿ) ಕಾಲವಾದ ನಂತರ ಅಹ್ಮದಿಯಾ ಖಿಲಾಫತ್ತಿನ ಅನುಗ್ರಹಪೂರ್ಣ ಕಾಲ ಪ್ರಾರಂಭವಾಯಿತು. ಖಿಲಾಫತ್ ಸಹ ಇಸ್ಲಾಮಿನ ಪ್ರಚಾರ ಕಾರ್ಯವನ್ನು ಮುಂದುವರಿಸಿತು. ವಿಭಿನ್ನ ದೇಶಗಳಲ್ಲಿ ಸಂಘಟನೆಯ ಪ್ರಚಾರಕರು (ಮುಬಲ್ಲಿಗ್) ಸಮಯುಕ್ಕೆ ಇತರರ ರೇಡಿಯೋ ಕಾರ್ಯಕ್ರಮಗಳೊಡನೆಯೇ ಆದಷ್ಟು ಮಟ್ಟಿಗೆ ಅಹ್ಮದಿಅತ್ತಿನ ಸಂದೇಶ ತಲುಪಿಸುವ ಕಾರ್ಯ ಮಾಡುತ್ತಿದ್ದರು. ಆದರೆ ಈಗ ಅಲ್ಲಾಹನ ಅನುಗ್ರಹದಿಂದ ನಾವು ಇಂದು ಸ್ವಂತ ರೇಡಿಯೋ ಮತ್ತು ದೂರದರ್ಶನ ಮೂಲಕ ಪ್ರಚಾರ ಕಾರ್ಯಗಳು ಕೈಗೊಳ್ಳುವ ಭಾಗ್ಯ ಪಡೆಯುತ್ತಿದ್ದೇವೆ. ಅಲ್ಲಾಹನು ನಮಗೆ ತನ್ನ ಚಾನಲ್ ನಡೆಸುವ ಭಾಗ್ಯ ದಯಪಾಲಿಸಿದಾಗ ಸೆಟಲೈಟುಗಳ ಮೂಲಕ ಲೋಕದಾದ್ಯಂತ ತಲುಪಲು ಸಾಧ್ಯವಾಯಿತು. ಹುಝೂರ್ ಅನ್ವರ್ ನುಡಿದರು. ನಿಸ್ಸಂಶಯವಾಗಿ ಇದು ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ದಿವ್ಯವಾಣಿ. ನಾನು ನಿನ್ನ ಸಂದೇಶವನ್ನು (ತಬ್ಲೀಗ್) ಲೋಕದ ಮೇರೆ ಮೇರೆಯವರೆಗೆ ತಲುಪಿಸುವೆನು". ಸಾದರಪಡಿಸುವ ದೃಷ್ಟಾಂತವಾಗಿದೆ. ಇಂದು ಲೋಕದಾದ್ಯಂತ MTA ವಿನ 19 ಸ್ಟೂಡಿಯೋಗಳಿವೆ. ಖಲೀಫತುಲ್ ಮಸೀಹ್ ಅವರ ನಿರ್ದೇಶನದ ಮೇರೆಗೆ ತಮ್ಮ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದಾರೆ. ಬ್ರಿಟನ್ ಅಲ್ಲದೇ ಖಾದಿಯಾನ್, ಘಾನ, ಜರ್ಮನಿ, ಅಮೇರಿಕಾ, ಮಾರಿಶಸ್, ಯುಗಾಂಡಾ, ಕೆನೆಡಾ ಒಳಗೊಂಡಂತೆ ಹಲವು ದೇಶಗಳಲ್ಲಿ ಸ್ಟೂಡಿಯೋ ಸ್ಥಾಪಿತವಾಗಿವೆ. ಅಲ್ಲಾಹನ ಅನುಗ್ರಹದಿಂದ ಖಾದಿಯಾನ್ ಮತ್ತು ಅಬ್ದುಲ್ ವಹಾಬ್ Studio GHANA ಸಮೇತ ಹಲವು Studio ಗಳ ಮೂಲಕ ಕಾರ್ಯಕ್ರಮಗಳು ನೇರಪ್ರಸಾರ ಮಾಡಲಾಗುತ್ತದೆ. ಜರ್ಮನಿಯಿಂದ ಜರ್ಮನ್ ಭಾಷೆಯಲ್ಲಿ ಸಹ ಕಾರ್ಯಕ್ರಮಗಳು ನಡೆಯುತ್ತದೆ. ಫ್ರೆಂಚ್, ತುರ್‌ಕಿಶ್, ಸವಾಹೇಲಿ ಅಲ್ಲದೇ ಇತರ ಭಾಷೆಗಳಲ್ಲಿ ಕಾರ್ಯಕ್ರಮಗಳು ಸಿದ್ಧಗೊಳ್ಳುತ್ತಿವೆ. ಮತ್ತು ಇಡೀ ಲೋಕದಲ್ಲಿ ಪ್ರಸಾರವಾಗುತ್ತಿವೆ. ಒಂದು ಸಮಯವಿತ್ತು. ಆಗ Studio ಏಕಮಾತ್ರ ಚಾನಲ್ ಇತ್ತು. ಆದರೆ ಈಗ ಅಲ್ಲಾಹನ ಅನುಗ್ರಹದಿಂದ MTA ಯ ಹಲವು ಚಾನಲ್‌ಗಳು ತಮ್ಮ ಪ್ರಸಾರ ಕಾರ್ಯಕ್ರಮಗಳು ಪ್ರಸಾರ ಮಾಡುತ್ತಿವೆ. ಹುಝೂರ್ ಅನ್ವರ್(ಅಬಿಅ) ನುಡಿದರು. ಯುವ ಕಾರ್ಯಕರ್ತರಿಗೆ ದುಆ ಮಾಡಬೇಕಾಗಿದೆ. ಅವರು ತುಂಬು ಉತ್ಸಾಹದಿಂದ ಪರಿಶ್ರಮವಹಿಸಿ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿದ್ದಾರೆ. ನಾನು ಸಹ ಸದರಿ ಕಾರ್ಯಕರ್ತರಿಗೆ ಕೃತಜ್ಞನಾಗಿದ್ದೇನೆ. ಮತ್ತು ದುಆ ಮಾಡುತ್ತೇನೆ. ಅಲ್ಲಾಹನು ನಿಮಗೆ ಹಝ್ರ್‌ರತ್ ಮಸೀಹ್ ಮೌಊದ್(ಅ) ರವರ ಶಿಕ್ಷಣವನ್ನು ಪ್ರಸಾರ ಮಾಡುವುದರಲ್ಲಿ ತಮ್ಮ ಪಾತ್ರ ವಹಿಸುವ ಭಾಗ್ಯ ದಯಪಾಲಿಸಲಿ. ಭಾಷಣದ ನಂತರ ಸಾಮೂಹಿಕ ಪ್ರಾರ್ಥನೆ (ದುಆ) ದೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಹುಝೂರ್ ಅನ್ವರ್ ಅವರ ಭಾಷಣದ ನಡುವೆ ಲೋಕದ ವಿಭಿನ್ನ ದೇಶಗಳಲ್ಲಿ MTA ಗೋಸ್ಕರ ಸೇವೆ ಮಾಡುವವರನ್ನು ನೇರವಾಗಿ ತೋರಿಸುತ್ತಿದ್ದರು. ಅವರು ತಮ್ಮ ತಮ್ಮ Studios ಗಳಲ್ಲಿ ಕುಳಿತುಕೊಂಡಿದ್ದರು. ಹುಝೂರರ ಭಾಷಣ ಆಲಿಸುತ್ತಿದ್ದರು. ಈ ದೃಶ್ಯ ಅತ್ಯಂತ ಆಹ್ಲಾದಕರ ಮತ್ತು ಸಂತೋಷ ಜನಕವಾಗಿತ್ತು. ಬದರ್ ಪತ್ರಿಕಾ ಬಳಗವು MTA International ನ ಈ ಯಶಸ್ವಿ ಸಮ್ಮೇಳನಕ್ಕೆ ಶುಭಾಶಯಗಳನ್ನು ಅರ್ಪಿಸುತ್ತಿದೆ.

**(ಅಲ್‌ಫಝುಲ್ ಇಂಟರ್‍ನ್ಯಾಶ್ನಲ್ ಲಂಡನ್‌ನ ವೆಬ್‌ಸೈಟ್)**


### ಖಾದಿಯಾನಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳಾ ಶಿಕ್ಷಕಿಯರು ಬೇಕಾಗಿದ್ದಾರೆ

ತಾಲಿಮುಲ್ ಇಸ್ಲಾಮ್ ಸೀನಿಯರ್ ಸೆಕೆಂಡರಿ ಸ್ಕೂಲ್ ಹಾಗೂ ನುಸ್ರತ್ Gims ಪ್ರೌಢಶಾಲೆಯಲ್ಲಿ Physical Education, Panjabi, Physics, Mathematics, English, Computer, Hindi, ವಿಷಯಗಳನ್ನು ಬೋಧಿಸಲು ಮಹಿಳಾ ಶಿಕ್ಷಕಿಯರ ಕೆಲ ಹುದ್ದೆಗಳು ತುಂಬಬೇಕಾಗಿದೆ. ಸೇವಾ ಭಾವನೆಯುಳ್ಳ ಮತ್ತು ಶೈಕ್ಷಣಿಕ ಅರ್ಹತೆ ಪಡೆದ ಇಚ್ಛೆಯುಳ್ಳ ಅಭ್ಯರ್ಥಿಗಳು–ನಝಾರತ್ ದೀವಾನ್ ನಿಂದ ಬೇಕಾದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ, ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹುದ್ದೆಗಳ ವಿವರ ಈ ಕೆಳಗಿನಂತಿದೆ.

(1)P.G.T (Post Graduate Teacher) ಶೈಕ್ಷಣಿಕ ಅರ್ಹತೆ: ಸಂಬಂಧಿತ ವಿಷಯಗಳಲ್ಲಿ 55% ಅಂಕಗಳೊಂದಿಗೆ Post graduation ಮುಗಿಸಿರಬೇಕು ಮತ್ತು B.Ed ಜೊತೆಯಲ್ಲಿ ಯಾವುದೇ ಸರಕಾರದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 2 ವರ್ಷಗಳ ಬೋಧನಾ ಅನುಭವ ಪಡೆದಿರಬೇಕು.

(2)T.G.T (Traind Graduate Generalline Teacher) ಶೈಕ್ಷಣಿಕ ಅರ್ಹತೆ 55% ಅಂಕಗಳೊಂದಿಗೆ Graduation ಮತ್ತು B.Ed ಜೊತೆಯಲ್ಲಿ ಸರ್ಕಾರದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಬೋಧನಾ ಅನುಭವ ಪಡೆದಿರಬೇಕು. (Post graduate) ಆದವರಿಗೆ ಆದ್ಯತೆ ಕೊಡಲಾಗುವುದು.)

(3)ಕಂಪ್ಯೂಟರ್ ಟೀಚರ್: ಶೈಕ್ಷಣಿಕ ಅರ್ಹತೆ, ಸಂಬಂಧಿತ ವಿಷಯಗಳಲ್ಲಿ Graduation (B.C.A) 55% ಅಂಕಗಳೊಂದಿಗೆ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಅನುಭವ ಹೊಂದಿರಬೇಕು. Post graduate ಆದವರಿಗೆ ಆಧ್ಯತೆ ನೀಡಲಾಗುವುದು.

* Physical Education Teacher ಶೈಕ್ಷಣಿಕ ಅರ್ಹತೆ: ಸಂಬಂಧಿತ ವಿಷಯಗಳಲ್ಲಿ Graduation ಆಗಿರಬೇಕು. (B.P.Ed 55% ಅಂಕಗಳೊಂದಿಗೆ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಅನುಭವ ಪಡೆದಿರಬೇಕು.

* TET ಅಥವಾ CTET ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು. ಅಭ್ಯರ್ಥಿಯ ವಯಸ್ಸು 20 ವರ್ಷಗಳಿಗಿಂತ ಕಡಿಮೆ ಮತ್ತು 40 ವರ್ಷಕ್ಕೆ ಮೀರಿರಬಾರದು. ಅನಿವಾರ್ಯ ಪರಿಸ್ಥಿತಿಯಲ್ಲಿ ವಯಸ್ಸಿನ ಮಿತಿಯ ರಿಯಾಯಿತಿಯ ಬಗ್ಗೆ ಪರಿಶೀಲಿಸಲಾಗುವುದು. * ಕೇವಲ ಕೇಂದ್ರೀಯ ಕಮಿಟಿ ಆಯ್ಕೆದಾರರ ಕಡೆಯಿಂದ ನಿಗದಿಪಡಿಸಿದ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಆಯ್ಕೆ ಮಾಡಿಕೊಳ್ಳಲಾಗುವುದು. ನೂರ್ ಆಸ್ಪತ್ರೆಯಿಂದ ವರದಿ ಪಡೆದ ಆರೋಗ್ಯವಂತರನ್ನು ಮಾತ್ರ ಪರಿಗಣಿಸಲಾಗುವುದು. * ಆಯ್ಕೆಯಾದ ಪಕ್ಷದಲ್ಲಿ ಅಭ್ಯರ್ಥಿಯು ಖಾದಿಯಾನಿನಲ್ಲಿ ತಮ್ಮ ವಸತಿಯ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕಾಗುತ್ತದೆ. * ಸಂದರ್ಶನಕ್ಕಾಗಿ ಖಾದಿಯಾನಿಗೆ ಕರೆದ ಪಕ್ಷದಲ್ಲಿ ಬಂದು ಹೋಗುವ ಖರ್ಚು ಅಭ್ಯರ್ಥಿಯ ಹೊಣೆಯಾಗಿರುತ್ತದೆ. ಸಂದರ್ಶನದ ತಾರೀಖು ನಂತರ ತಿಳಿಸಲಾಗುವುದು. * ಬೇಕಾದ ಅರ್ಜಿ ನಮೂನೆಗಳು, ದಫತರ್ ನಝಾರತ್ ದೀವಾನ್ ಅಥವಾ ಈ ಕೆಳಗೆ ನಮೂದಿಸಿದ ವಿಳಾಸದಿಂದ ಪಡೆಯಬಹುದು. * ಶೈಕ್ಷಣಿಕ ಅರ್ಹತೆ ಮತ್ತು ಅನುಭವ ಸನದುಗಳನ್ನು Self Attested ಮಾಡಿ ಅದರ ನಕಲುಗಳನ್ನು ನಝಾರತ್ ದೀವಾನ್ ನಲ್ಲಿ ಅರ್ಜಿ ಕರೆದ ಎರಡು ತಿಂಗಳುಗಳ ಒಳಗೆ ತಲುಪಬೇಕಾಗಿದೆ. ಭತ್ಯೆ ಇತ್ಯಾದಿ ಮಾಹಿತಿಗೋಸ್ಕರ ಕೆಳಗಿನ Email, ದೂರವಾಣಿ ನಂಬರುಗಳ ಆಧರಿಸಿ ಕಚೇರಿಯ ವೇಳೆಗಳಲ್ಲಿ ಸಂಪರ್ಕ ಮಾಡಬಹುದು.

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್
ಜಿಲ್ಲಾ ಗುರುದಾಸಪುರ ಪಿನ್ ನಂ–143516
ಮೊಬೈಲ್: 09682587713, 09682627592 ಕಛೇರಿ(Office) : 01872–501130
E-mail: diwan@qadian.in

**(ನಾಝೀರ್ ದೀವಾನ್, ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 22 July 2021, Issue No. 29

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)


***ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)***

**(ಬದರ್ ಸಂಚಿಕೆ 28ರ ವರದಿಯ ಉಳಿದ ಭಾಗ)**

ಮಹಿಳೆಯೊಬ್ಬರು ಹುಝೂರ್(ಅಬಿಅ) ಕೃತಜ್ಞತೆ ಸಲ್ಲಿಸುತ್ತಾ ಹೇಳಿದರು. ನಾನು ನಮಾಝ್ ಮತ್ತು ದುಆ ಕಲಿಯುತ್ತಿದ್ದೇನೆ. ದುಆ ತುಂಬ ದೀರ್ಘವಾಗಿವೆ ಆದರೂ ಕಲಿಯುತ್ತಿದ್ದೇನೆ. ಯಾವುದಾದರೊಂದು ಸಣ್ಣದಾದ ದುಆ ಹೇಳಿಕೊಡಿರಿ. ಅದನ್ನು ನಾನು ಕಂಠಸ್ತ ಮಾಡಿಕೊಂಡು ಓದಬಹುದಾಗಿದೆ.

ಆಗ ಹುಝೂರ್(ಅಬಿಅ) ಹೇಳಿದರು. ಎಲ್ಲಾ ದುಆಗಳು ಉತ್ತಮವಾಗಿಯೇ ಇವೆ. ಸೂರಃ ಇಖ್‌ಲಾಸ್ ಚಿಕ್ಕದಾಗಿದೆ ನೀವು ಅದನ್ನು ಕಂಠಸ್ತ ಮಾಡಿಕೊಳ್ಳಿರಿ.

ಈ ನೌಮುಬಾಯೀನ್ ಮಹಿಳೆಯರ ಹುಝೂರರೊಂದಿಗಿನ ಈ ಸಭೆ 8 ಗಂಟೆಗೆ ಮುಕ್ತಾಯಗೊಂಡಿತು.

## ನೌಮುಬಾಯಿನ್(ಪುರುಷರ) ಹುಝೂರ್ ಅವ್ವರ್(ಅತಬಿಅ)ರವರೊಡನೆ ಭೇಟಿ

ಈ ಕಾರ್ಯಕ್ರಮದ ನಂತರ 8 ಗಂಟೆಗೆ ಅವರ ಭೇಟಿಯೂ ಪುರುಷ ನೌಮಭಾಯೆನ್ ಬಂದುಗಳೊಡನೆ ಪ್ರಾರಂಭವಾಯಿತು.

ಓರ್ವ ಅರಬ್ ಮಿತ್ರರೊಡನೆ ಹುಝೂರ್(ಅಬಿಅ) ಕೇಳಿದರು. ನೀವು ಏನು ನೋಡಿ ಬೈಅತ್ ಆಗಿರುವಿರಿ. ಆಗ ಅವರು ಹೇಳಿದರು. ನಾನು ಅಹ್ಮದಿಯತ್ತಿನಲ್ಲಿ ಯಥಾರ್ಥ ಇಸ್ಲಾಮ್ ಅನ್ನು ಕಂಡಿದ್ದೇನೆ. ಖಿಲಾಫತ್ತಿನ ಸತ್ಯವನ್ನು ಕಂಡಿದ್ದೇನೆ. ನಾನು ಸ್ವಪ್ನದಲ್ಲಿ ಕಂಡಿರುತ್ತೇನೆ. ಒಂದು ಗೋಡೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಅಹ್ಮದಿಯತ್ ಎಂದು ಬರೆಯಲಾಗಿತ್ತು. ಮತ್ತು ಅಹ್ಮದಿಯತ್ ಪದದಿಂದ ಪ್ರಕಾಶ ಸೂಸುತಿತ್ತು. ಈ ಸ್ವಪ್ನದಿಂದ ನನಗೆ ನೆಮ್ಮದಿಯಾಯಿತು. ನಾನು ಬೈಅತ್ ಮಾಡಿದೆ. ಓರ್ವ ಅರಬ್ ಅತಿಥಿ ಹೇಳಿದರು. ಇಲ್ಲಿ ಬರುವ ಮುಂಚೆ ತಮ್ಮನ್ನು ಸಮೀಪದಿಂದ ಕಾಣಬೇಕು ಎಂದು ನನ್ನ ಅಭಿಲಾಷೆಯಾಗಿತ್ತು. ನಿನ್ನೆ ತಾವು ಜರ್ಮನ್ ಅತಿಥಿಯರನ್ನು ಸಂಬೋಧಿಸುತ್ತಿರುವಾಗ ನಾನು ಮುಂದಿನ ಭಾಗದಲ್ಲಿ ಕುಳಿತುಕೊಂಡಿದ್ದೆ. ಹೀಗೆ ಅಲ್ಲಾಹನು ನನ್ನ ಅಭಿಲಾಷೆ ಈಡೇರಿಸಿದನು. ಇಂದು ನಾನು ತಮ್ಮ ಮುಂದೆ ಕುಳಿತುಕೊಂಡಿದ್ದೇನೆ ಮತ್ತು ತಮ್ಮ ಸಮೀಪದಲ್ಲಿದ್ದೇನೆ.

ಓರ್ವ ಸೀರಿಯನ್ ಅಹ್ಮದಿ ಮಿತ್ರರು ಜರ್ಮನಿಯಲ್ಲಿ ವಾಸಿಸುತ್ತಿದ್ದರು, ಜಲ್ಸದ ಎಲ್ಲಾ ವಾತಾವರಣ ಸಹೋದರತೆಯಿಂದ ಕೂಡಿತ್ತು. ಅಹ್ಮದಿ ಬಂಧುಗಳ ಉತ್ತಮ ನಡತೆಯನ್ನು ಕಂಡು ನನ್ನ ಮನಸ್ಸು ತುಂಬಿಬಂದಿದೆ. ನಾನು ಈ ಜಲ್ಸದಿಂದ ತುಂಬ ಪ್ರಭಾವಿತನಾಗಿದ್ದೇನೆ.

ಓರ್ವ ಸೀರಿಯನ್ ನವ ಅಹ್ಮದಿ ತಿಳಿಸಿದರು. ಜರ್ಮನಿಯಲ್ಲಿ ಅರಬ್ ಅಹ್ಮದಿ ಬಾಂಧವರೊಡನೆ ತಬ್ಲೀಗಿ ಸಭೆಯಲ್ಲಿ ಭಾಗವಹಿಸಿದ್ದೆ. ಪ್ರಶ್ನೆ ಉತ್ತರಗಳು ನಡೆದವು. ಅದು ನನಗೆ ತೃಪ್ತಿಯಾಯಿತು. ಆಗ ಬೈಅತ್ ಮಾಡಿದೆ.

ಕೆಮರೂನ್ ದೇಶಕ್ಕೆ ಸಂಬಂಧಿಸಿದ ಮಿತ್ರರೊಬ್ಬರು ತಿಳಿಸುತ್ತಾರೆ. 2007 ರಿಂದ ನನಗೆ ಜಮಾಅತಿನೊಂದಿಗೆ ಸಂಪರ್ಕವಾಗಿತ್ತು. ಜಮಾಅತಿನ ಬಗ್ಗೆ ತಿಳುವಳಿಕೆ ಪಡೆಯಲು ಪ್ರಾರಂಭಿಸಿದೆ. 2011 ರಲ್ಲಿ ನಾನು ನಾಯೆಜೇರಿಯಾಕ್ಕೆ ಹೋಗಿ ಬೈಅತ್ ಮಾಡಿದೆ. ನಾನು ಅಹ್ಮದಿಅತ್ ಸ್ವೀಕರಿಸಿದ ನಂತರ ನನ್ನ ಕುಟುಂಬದಲ್ಲಿ ತುಂಬ ವಿರೋಧ ವ್ಯಕ್ತವಾಯಿತು. ನಾನು ಮನೆ ಬಿಟ್ಟು ಹೋಗುವ ನಿರ್ಣಯ ತೆಗೆದುಕೊಂಡೆ. ನಾನು ನಾಯ್ಜೆರಿಯ ಬಂದುಬಿಟ್ಟೆ. ಮತ್ತೆ ಅಲ್ಲಿಂದ ಮರಾಕಶ್ ಬಂದೆ. ಮತ್ತೆ ಸ್ಪೇನ್ ಸೇರಿಕೊಂಡೆ. ನನ್ನ ಬಡತನ ಮತ್ತು ಅಸಹಾಯಕತೆಯ ಯಾವ ಪರಿಸ್ಥಿತಿ ಬಂದು ಒದಗಿತ್ತೆಂದರೆ ಹಸಿವಿನ ಕಾರಣ ಮಕ್ರೂಹ್ ವಸ್ತುಗಳು ಸಹ ತಿನ್ನಬೇಕಾಯಿತು. ಇತ್ತೀಚಿಗೆ ನಾನು ಬೆಲ್ಜಿಯಂನಲ್ಲಿ ಇದ್ದೇನೆ. ಮತ್ತು ವಿಧಿಬದ್ಧವಾಗಿ ಜಮಾಅತಿನ ಸಂಪರ್ಕದಲ್ಲಿದ್ದೇನೆ. ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿದ್ದೇನೆ. ವ್ಯವಸ್ಥೆ ನೋಡಿ ತುಂಬ ಪ್ರಭಾವಿತಗೊಂಡಿರುತ್ತೇನೆ.

ಒಬ್ಬ ಜರ್ಮನ್‌ನ ನವ ಅಹ್ಮದಿ PATRICK GEELHAAR ಸಹ ಈ ಸಭೆಯಲ್ಲಿ ಉಪಸ್ಥಿತರಿದ್ದರು. ಅವರು ಹೇಳಿದರು. ನನಗೆ ಇಂದು ಬೈಅತ್ ಮಾಡುವ ಸೌಭಾಗ್ಯ ದೊರೆತಿದೆ. ಅದಕ್ಕೆ ಕಾರಣ ತಮ್ಮ ಜರ್ಮನ್ ಅತಿಥಿಗಳೊಂದಿಗಿನ ಸಂಬೋಧನೆಯಾಗಿತ್ತು. ನನಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನಲ್ಲಿ ಸತ್ಯವಾದ ಪ್ರೀತಿ ನೋಡುವಂತಾಯಿತು. ನನ್ನ ಮನಸ್ಸು ಪ್ರೀತಿ ಮತ್ತು ಪ್ರಕಾಶದಿಂದ ತುಂಬಿ ಹೋಯಿತು. ನಾನು ಈಗ ಹುಝೂರ್(ಅಬಿಅ) ರವರ ಪ್ರಕಾಶ ಅನುಭವಿಸುತ್ತಿದ್ದೇನೆ. ಇಲ್ಲಿಂದ ನಾನು ಶಾಂತಿ ಮತ್ತು ಪ್ರೀತಿಯ ಸಂದೇಶ ಪಡೆದು ಹೋಗುವೆನು. ಇತರ ಜನರಿಗೂ ಈ ಸಂದೇಶ ತಲುಪಿಸುವೆನು. ಈ ಸಮಯ ನಾನು ಪ್ರೀತಿಯ ಭಾವಗಳಿಂದ ತುಂಬಿಹೋಗಿರುತ್ತೇನೆ. ಹೊರಗೆ ಹೋಗಿ ಪೂರ್ಣ ಪ್ರಯತ್ನದಿಂದ ಇತರರಿಗೂ ಈ ಸಂದೇಶ ತಲುಪಿಸ ಬಯಸುತ್ತೇನೆ.

ಸ್ಪೇನಿನಿಂದ ಬಂದ ಓರ್ವ ಅರಬ್ ಮಿತ್ರರು ಹೇಳಿದರು. ಸ್ಪೇನಿನಲ್ಲಿ ಅರಬ್ ಅಹ್ಮದಿಯರ ಸಂಖ್ಯೆ ತುಂಬ ಕಡಿಮೆ ಇದೆ. ಅವರ ಹೆಚ್ಚಳಕ್ಕಾಗಿ ತಮ್ಮಲ್ಲಿ ಪ್ರಾರ್ಥಿಸಲು ಕೇಳಿಕೊಳ್ಳುವೆನು.

ಆಗ ಹುಝೂರ್ ಹೇಳಿದರು. ಜಮಾಅತ್ ನೀವು ಹೆಚ್ಚಿಸಬೇಕಾಗಿದೆ. ತಬ್ಲೀಗ್ ಮಾಡಿರಿ ಮತ್ತು ಅಹ್ಮದಿಯತ್ತಿನ ಸಂದೇಶವನ್ನು ತಲುಪಿಸಿರಿ. ವಿವಹಗಳ ಮೂಲಕ ಸಂಖ್ಯೆ ಹೆಚ್ಚಿಸಬಹುದು ಅಥವಾ ನೀವು ಬಯಸಿದ ಹಾಗೆ ಅಲ್ಲಾಹನು ನಿಮ್ಮ ಕಾರ್ಯಕ್ರಮಗಳಲ್ಲಿ ಅನುಗ್ರಹ ದಯಪಾಲಿಸಲಿ ಮತ್ತು ಯಶಸ್ಸು ನೀಡಲಿ.

ಓರ್ವ ಜರ್ಮನ್ ನವ ಅಹ್ಮದಿ ಹುಝೂರ್(ಅಬಿಅ) ರಲ್ಲಿ ದುಆ ಮಾಡಲು ಕೇಳಿಕೊಳ್ಳುತ್ತ ಹೇಳುತ್ತಾರೆ, ತಾವು ಲೋಕದ ವಿವಿಧ ಮುಖಂಡರಿಗೆ ಪತ್ರಗಳನ್ನು ಬರೆದು ಲೋಕದಲ್ಲಿ ನ್ಯಾಯ ಮತ್ತು ಸಮಾನತೆಯಿಂದ ಶಾಂತಿಯನ್ನು ಸ್ಥಾಪಿಸಲು ಕರೆ ನೀಡಿದ್ದೀರಿ ಅವರೇನಾದರೂ ಪ್ರತಿಕ್ರಿಯೆ ನೀಡಿದ್ದಾರೆಯೇ? ಆಗ ಹುಝೂರ್(ಅಬಿಅ) ಹೇಳಿದರು. ಕೆನಡ ಮತ್ತು ಯು.ಕೆ ಯ ಪ್ರಧಾನಮಂತ್ರಿಗಳು ಉತ್ತರ ನೀಡಿದ್ದಾರೆ. ಉಳಿದವರಲ್ಲಿ ಅಮೇರಿಕಾ ಮತ್ತು ಕೆಲವು ಇತರರ ಸಂದೇಶವಿತ್ತು ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದು.

ಬೆಲ್ಜಿಯಂನಿಂದ ಬಂದ ಓರ್ವ ಅರಬ್ ಮಿತ್ರರು ಹೇಳಿದರು. ಒಂದು ದಿನ ನಾನು ಜಮಾಅತಿನ ಕೇಂದ್ರ ಭಾಗದ ಹೊರಗಿನಿಂದ ಹೋಗುತ್ತಿದ್ದೆ. ಕೇಂದ್ರದ ಮುಂಭಾಗದಲ್ಲಿ ಕಲಿಮ ತಯ್ಯಬ "ಲಾ ಇಲ್ಲಾಹ್ ಇಲ್ಲಲ್ಲಾಹ್, ಮುಹಮ್ಮದರು ರಸೂಲುಲ್ಲಾ(ಸ)" ಬರೆದದ್ದನ್ನು ಕಂಡಾಗ ಒಳಗೆ ಹೋದೆ ಹೀಗೆ ಇದು ನನ್ನ ಜಮಾಅತಿನ ಮಿತ್ರರೊಂದಿಗಿನ ಪ್ರಥಮ ಭೇಟಿಯಾಗಿತ್ತು. ಅಲ್ಲಿಯ ಮುಬಲ್ಲಿಗರನ್ನು ಭೇಟಿ ಮಾಡಿದೆ. ಅಹ್ಮದಿಅತ್ ಕುರಿತು ಮಾತುಕತೆಯಾಯಿತು. ಮೂರು ನಾಲ್ಕು ದಿನ ಬಂದು ನಮಾಝ್‌ಗಳನ್ನು ನಿರ್ವಹಿಸಿದೆ. ಹೀಗೆ ಸಂಬಂಧ ಗಟ್ಟಿಯಾಯಿತು. ಮತ್ತೆ ಅಹ್ಮದಿಯರೊಂದಿಗೆ ನನ್ನ ಸಂಬಂಧ ನಿರಂತರವಾಗಿತ್ತು. ನಾನು ಅಹ್ಮದಿಯಾ ಮಸೀದಿಯಲ್ಲಿ ನಮಾಝ್ ನಿರ್ವಹಿಸುತ್ತಿರುವಾಗ ಇತರ ಮಸೀದಿಗಳಿಂದಲೂ ಇಲ್ಲಿ ಹೆಚ್ಚು ನೆಮ್ಮದಿ ದೊರೆಯುತಿತ್ತು.

ಇದೀಗ ಹುಝೂರರನ್ನು ನೋಡಿ ನನ್ನ ಭಾವನೆ ಹೇಳತೀರದು. ನನಗೆ ಏನಾಗಿದೆ ಎಂದು ತಿಳಿಯದಂತಾಯಿತು. ನಾನು ಅಳತೊಡಗಿದೆ. ನಾನು ನನ್ನನ್ನು ಒಂದು ಹೊಸ ಮನುಷ್ಯನಂತೆ ಭಾವಿಸುವಂತಾಯಿತು. ಹುಝೂರ್(ಅಬಿಅ) ಪವಿತ್ರ ಮುಖದ ಮೇಲೆ ನನ್ನ ದೃಷ್ಟಿ ಬೀಳುತಿತ್ತು. ನನ್ನ ಮನಸ್ಸು ಸಾಕ್ಷ್ಯವಹಿಸುತ್ತಿತ್ತು. ಈ ವ್ಯಕ್ತಿ ಸುಳ್ಳುಗಾರನಾಗಲು ಸಾಧ್ಯವಿಲ್ಲ. ಅವರು ಹಗಲಿರುಳು ನಮ್ಮ ಹಿತಕ್ಕಾಗಿ ಮಾರ್ಗದರ್ಶನಕ್ಕಾಗಿ ದುಡಿಯುತಿದ್ದಾರೆ. ಈಗ ನಾನು ಅಹ್ಮದಿಯತ್‌ನೊಂದಿಗೆ ಇದ್ದೇನೆ. ನನಗಾಗಿ ದುಆ ಮಾಡಿರಿ. ನನ್ನ ವಿರೋಧವು ಆಗುತ್ತಿದೆ. ಜನರು ನನ್ನನ್ನು ಕಾಫಿರ್ ಎಂದೇ ಭಾವಿಸುತ್ತಾರೆ.

ಸ್ಪೇನ್‌ನಿಂದ ಬಂದ ಓರ್ವ, ನವ ಅಹ್ಮದಿಯೊಬ್ಬರು ತಿಳಿಸಿದರು. ನಾನು ಜಲ್ಸಕ್ಕೆ ಪ್ರಥಮ ಬಾರಿಗೆ ಬಂದಿರುತ್ತೇನೆ. ನನಗೆ ಹುಝೂರ್(ಅಬಿಅ) ರವರನ್ನು ಭೇಟಿಯಾಗುವ ಭಾಗ್ಯ ದೊರೆಯಿತು. ನಾನು ಅವರನ್ನು ಸಮೀಪದಿಂದ ಕಂಡಿದ್ದೇನೆ. ಅಲ್ಲಾಹನು ಅವರ ನೆರಳು ನಮ್ಮ ಮೇಲೆ ಸಲಾಮತಾಗಿರಿಸಲಿ.

ಸ್ಪೇನಿನಿಂದ ಬಂದ ನವ ಅಹ್ಮದಿಯೊಬ್ಬರು ಹೇಳಿದರು. ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದ ವಿಷಯವೆಂದರೆ, ಜಮಾಅತಿನ ಸತ್ಯತೆಯಾಗಿದೆ. ಜಮಾಅತಿನ ವಿರುದ್ಧ ಜನರು ಸುಳ್ಳು ಹೇಳುತ್ತಾರೆ. ಅವರ ಸುಳ್ಳು ಹೇಳುವ ಕಾರಣ ಜಮಾಅತಿನ ಸತ್ಯ ಮತ್ತು ಸತ್ಯಸಂಧತೆ ನನ್ನ ಮೇಲೆ ಸ್ಪಷ್ಟವಾಯಿತು ಮತ್ತು ನಾನು ಅಹ್ಮದಿಯತ್ ಸ್ವೀಕರಿಸಿದೆ.

ಹೀಗೆ ನವ ಅಹ್ಮದಿಯರೊಂದಿಗಿನ ಹುಝೂರರ ಭೇಟಿ 8 ಗಂಟೆ 20 ನಿಮಿಷಗಳವರೆಗೆ ನಡೆಯಿತು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.